ಬಿ.ಪಿ.ಎಲ್. ಪಡಿತರಿಗೆ ಸಮರ್ಪಕ ಅಕ್ಕಿ ವಿತರಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 35 (147)
ಸದಸ್ಯರ ಹೆಸರು : ಶ್ರೀ ಶಿವಲಿಂಗೇಗೌಡ ಕೆ.ಎಂ (ಅರಸೀಕೆರೆ)
ಉತ್ತರಿಸುವ ಸಚಿವರು : ಶೋಭಾ ಕರಂದ್ಲಾಜೆ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಪ್ರಶ್ನೆಗಳು:-

ಅ) ಕರ್ನಾಟಕ ರಾಜ್ಯದ ಎಷ್ಟು ಬಿ.ಪಿ.ಎಲ್ ಕಾರ್ಡುದಾರರಿಗೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗುತ್ತಿದೆ.

ಆ) ಕೇಂದ್ರ ಸರ್ಕಾರದ ನಿಯಮಾವಳಿಗಳ ಪ್ರಕಾರ ಪ್ರತಿ ಬಿ.ಪಿ.ಎಲ್ ಕುಟುಂಬಕ್ಕೆ 35 ಕೆ.ಜಿ. ಅಕ್ಕಿ ನೀಡಬೇಕಾಗಿರುವುದು ನ್ಯಾಯ ಸಮ್ಮತವೇ?

ಇ) ಹಾಗಿದ್ದಲ್ಲಿ, ಪ್ರತಿ ಬಿ.ಪಿ.ಎಲ್ ಕುಟುಂಬಕ್ಕೆ 35 ಕೆ.ಜಿ. ಅಕ್ಕ ನೀಡದಿರಲು ಕಾರಣಗಳೇನು?

ಉತ್ತರಗಳು:-

ಅ) ರಾಜ್ಯದ ಯಾವುದೇ ಬಿ.ಪಿ.ಎಲ್. ಕಾರ್ಡುದಾರರಿಗೆ ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ಅನುದಾನ ಬಿಡುಗಡೆಯಾಗುತ್ತಿಲ್ಲ. ಆದರೆ, 31.29 ಲಕ್ಷ ಬಿ.ಪಿ.ಎಲ್ ಕುಟುಂಬಗಳಿಗಾಗಿ, ಆಹಾರಧಾನ್ಯ ಬಿಡುಗಡೆಯಾಗುತ್ತಿದೆ.

ಆ) ಹೌದು.

ಇ) ರಾಜ್ಯದಲ್ಲಿ 31.29 ಲಕ್ಷ ಕುಟುಂಬಗಳು ಮಾತ್ರ ಬಿ.ಪಿ.ಎಲ್ ಕುಟುಂಬಗಳೆಂದು ಕೇಂದ್ರ ಸರ್ಕಾರ ನಿಗದಿಪಡಿಸಿರುತ್ತದೆ. ಅಷ್ಟು ಕುಟುಂಬಗಳಿಗೆ ಮಾತ್ರ ಸಬ್ಸಿಡಿಯುಕ್ತ ಆಹಾರಧಾನ್ಯವನ್ನು (35 ಕೆ.ಜಿ. ಮಾತ್ರ) ಪೂರೈಸುತ್ತಿದೆ. ಕೇಂದ್ರ ಸರ್ಕಾರವು ವಿಧಿಸಿದ ಮಿತಿ 31.29

ಲಕ್ಷಕ್ಕಿಂತ ಹೆಚ್ಚಾಗಿ ರಾಜ್ಯವು ಎಷ್ಟೇ ಬಿ.ಪಿ.ಎಲ್ ಕುಟುಂಬಗಳನ್ನು ಗುರುತಿಸಿಕೊಂಡರೂ ಅವರಿಗೆ ಆಹಾರಧಾನ್ಯ ಪೂರೈಕೆಯನ್ನು ರಾಜ್ಯವೇ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ರಾಜ್ಯದಲ್ಲಿ ಪ್ರಸ್ತುತ ಸುಮಾರು 84,07,472 ಬಿ.ಪಿ.ಎಲ್ ಕುಟುಂಬಗಳಿದ್ದು, ಕೇಂದ್ರ ಸರ್ಕಾರ ವಿಧಿಸಿದ ಮಿತಿಗಿಂತ ಸುಮಾರು 52,78,472 ಹೆಚ್ಚುವರಿ ಬಿ.ಪಿ.ಎಲ್ ಕುಟುಂಬಗಳು ರಾಜ್ಯದಲ್ಲಿರುತ್ತವೆ. ಈ ಎಲ್ಲಾ ಕುಟುಂಬಗಳಿಗೆ ವಿತರಿಸಲು ಕೇಂದ್ರ ಸರ್ಕಾರವು ಒದಗಿಸುವ ಆಹಾರಧಾನ್ಯ ಸಾಕಾಗುತ್ತಿಲ್ಲ. ಆದುದರಿಂದ, ಬಿ.ಪಿ.ಎಲ್ ಕಾರ್ಡುಗಳಿಗೆ ಆಹಾರಧಾನ್ಯವನ್ನು ಯೂನಿಟ್ ಪದ್ಧತಿ ಆಧಾರದ ಮೇಲೆ ವಿತರಣೆ ಮಾಡಲಾಗುತ್ತಿದೆ. ಯೂನಿಟ್ ಪದ್ಧತಿಯಂತೆ ಒಬ್ಬ ವ್ಯಕ್ತಿಯನ್ನು ಒಂದು ಯೂನಿಟ್ ಎಂದು ಪರಿಗಣಿಸಿ, ಕುಟುಂಬವೊಂದಕ್ಕೆ ಕನಿಷ್ಟ 4 ಕೆ.ಜಿ. ರಿಂದ ಗರಿಷ್ಟ 20 ಕೆ.ಜಿ. ಅಕ್ಕಿಯನ್ನು ಮತ್ತು ಕನಿಷ್ಟ 1 ಕೆ.ಜಿ ರಿಂದ ಗರಿಷ್ಟ 3 ಕೆ.ಜಿ. ಗೋಧಿಯನ್ನು ವಿತರಿಸಲಾಗುತ್ತಿದೆ. ಕುಟುಂಬವೊಂದಕ್ಕೆ ನೀಡಬಹುದಾದ ಆಹಾರ ಪದಾರ್ಥಗಳ ಪ್ರಮಾಣ ಈ ಕೆಳಕಂಡಂತಿದೆ.

ಪಡಿತರ ಚೀಟಿಯ ವಿಧ	ಅಕ್ಕಿ	ಗೋಧಿ
	ಪ್ರಮಾಣ (ಪ್ರತಿ ಕೆ.ಜಿ.ಗೆ)	ಪ್ರಮಾಣ (ಪ್ರತಿ ಕೆ.ಜಿ.ಗೆ)
ಎಎವೈ	29	6
ಬಿಪಿಎಲ್	ಏಕಸದಸ್ಯ : 04 ದ್ವಿಸದಸ್ಯ : 08 ತ್ರಿಸದಸ್ಯ : 12 ನಾಲ್ಕು ಸದಸ್ಯ : 16 ಐದು ಮತ್ತು ಹೆಚ್ಚಿನ ಸದಸ್ಯ : 20	ಏಕಸದಸ್ಯ : 01 ದ್ವಿಸದಸ್ಯ : 01 ತ್ರಿಸದಸ್ಯ : 02 ನಾಲ್ಕು ಸದಸ್ಯ : 03 ಐದು ಮತ್ತು ಹೆಚ್ಚಿನ ಸದಸ್ಯ : 03

ಎಪಿಎಲ್ ಕಾರ್ಡುದಾರರಿಗಾಗಿ ಬಿಡುಗಡೆ ಮಾಡಿದ ಆಹಾರಧಾನ್ಯಗಳನ್ನು ಸಹ ಬಿಪಿಎಲ್ ಕಾರ್ಡುದಾರರಿಗೆ ಆಹಾರಧಾನ್ಯಕ್ಕಾಗಿ ರಾಜ್ಯ ಸರ್ಕಾರವು ಉಪಯೋಗಿಸಿಕೊಳ್ಳುತ್ತಿದೆ. ಕೇಂದ್ರ ಸರ್ಕಾರ ವಿಧಿಸಿದ ಮಿತಿಗಿಂತ ಹೆಚ್ಚುವರಿ ಬಿಪಿಎಲ್ ಪಡಿತರ ಚೀಟಿಗಳಿರುವುದರಿಂದ, ಹೆಚ್ಚುವರಿ ಬಿಪಿಎಲ್ ಪಡಿತರ ಚೀಟಿದಾರರಿಗೂ ಆಹಾರಧಾನ್ಯ ಒದಗಿಸುವ ದೃಷ್ಟಿಯಿಂದ ಎಲ್ಲಾ ಬಿಪಿಎಲ್ ಕುಟುಂಬಗಳಿಗೆ 35 ಕೆ.ಜಿ. ಆಹಾರಧಾನ್ಯ ನೀಡುವುದು ಸಾಧ್ಯವಾಗುತ್ತಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಮೂಲವಾದಂಥ ಪ್ರಶ್ನೆ ಒಂದು ಬಿಪಿಎಲ್ ಕುಟುಂಬಕ್ಕೆ 35 ಕೆ.ಜಿ. ಅಕ್ಕಿಯನ್ನು ಕಾನೂನುಬದ್ಧವಾಗಿ ಕೊಡಬೇಕೆಂದು ಕೇಂದ್ರ ಸರ್ಕಾರದ ಕಾನೂನಿದೆ. ಆದರೆ, ಆ 35 ಕೆ.ಜಿ. ಅಕ್ಕಿಯನ್ನು ಇವರು ತೆಗೆದುಕೊಂಡು ಆ ಬಿಪಿಎಲ್ ಕುಟುಂಬಗಳಿಗೆ ಕೊಡಬೇಕಾದ ಅಕ್ಕಿಯನ್ನು 4 ಕೆ.ಜಿ. ಯೂನಿಟ್ ಮಾಡಿದ್ದಾರಲ್ಲಾ, ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಇದೆಯೇ? ಆ 35 ಕೆ.ಜಿ. ಅಕ್ಕಿಯನ್ನು ಬಿಪಿಎಲ್ ಕುಟುಂಬಕ್ಕೆ ಯಾವ ಉದ್ದೇಶದಿಂದ ಕೇಂದ್ರ ಸರ್ಕಾರ ಕಾನೂನನ್ನು ಜಾರಿಗೆ ತಂದು, ಪುಕ್ಕಟೆಯಾಗಿ 35 ಕೆ.ಜಿ ಕೊಡತಕ್ಕಂಥ ಅಕ್ಕಿಯನ್ನು ಇವರು 4 ಕೆ.ಜಿ. ಒಂದು ಯೂನಿಟ್ ಮಾಡಿ ಒಂದು ಕುಟುಂಬಕ್ಕೆ ಒಬ್ಬರು ಇರಲಿ, ಒಬ್ಬ ವ್ಯಕ್ತಿಗೆ 4 ಕೆ.ಜಿ ಕೊಡುತ್ತಿರುವುದು ಕಾನೂನಿಗೆ ವಿರುದ್ಧ ಅಲ್ಲವೇ ಇದು? ಸಚಿವರು ಈ ಬಗ್ಗೆ ಹೇಳಬೇಕು. ಯಾವ ಉದ್ದೇಶಕ್ಕೋಸ್ಕರ ಇವತ್ತು ಕೇಂದ್ರ ಸರ್ಕಾರ ಒಂದು ಬಡ ಬಿಪಿಎಲ್ ಕುಟುಂಬಕ್ಕೆ ಕೊಡುತ್ತಿರುವಂಥ 35 ಕೆ.ಜಿ. ಅಕ್ಕಿಯನ್ನು ನೀವು ವಿಂಗಡಣೆ ಮಾಡಿ "ಯಾರದ್ದೋ ದುಡ್ಡು ಯಲ್ಲಮ್ಮನ ಜಾತ್ರೆ" ಮಾಡುತ್ತಿದ್ದೀರಲ್ಲ, ಇದು ಸರಿಯೇ? ಯಲ್ಲಮ್ಮನ ಜಾತ್ರೆ ಮಾಡುವುದುಕ್ಕೆ Permission ಕೊಟ್ಟವರು ಯಾರು ಹೇಳಿ?

ಕುಮಾರಿ ಶೋಭಾ ಕರಂದ್ಲಾಜೆ:– ಸನ್ಮಾನ್ಯ ಸಭಾಧ್ಯಕ್ಷರೆ, ಈ ಬಗ್ಗೆ ಕಳೆದ ಹಲವಾರು ಸಾರಿ ಚರ್ಚೆಯಾಗಿದೆ. ನಮ್ಮ ರಾಜ್ಯದಲ್ಲಿ ಒಟ್ಟು 1 ಕೋಟಿ 68 ಲಕ್ಷ ಕಾರ್ಡುಗಳನ್ನು ವಿತರಣೆ ಮಾಡಿರುವುದು ಈ ಸದನಕ್ಕೆ ಗೊತ್ತಿದೆ. ಇದರಲ್ಲಿ 11.99 ಅಂದರೆ ಸುಮಾರು 12 ಲಕ್ಷದಷ್ಟು ಅಂತ್ಯೋದಯ ಕಾರ್ಡುಗಳು. ಈ ಅಂತ್ಯೋದಯ ಕಾರ್ಡುಗಳಿಗೆ 29 ಕೆ.ಜಿ. ಅಕ್ಕಿ ಮತ್ತು 6 ಕೆ.ಜಿ. ಗೋಧಿಯನ್ನು ಈಗಲೂ ಕೊಡಲಾಗುತ್ತಿದೆ. ಕೇಂದ್ರ ಸರ್ಕಾರದ ಪ್ರಕಾರ ಬಿಪಿಎಲ್ ಕುಟುಂಬ ಇರಬೇಕಾಗಿರುವುದು 31 ಲಕ್ಷ 29 ಸಾವಿರ. ಆದರೆ ನಾವು ನಮ್ಮ ರಾಜ್ಯದಲ್ಲಿ ಎಷ್ಟು ಜನಕ್ಕೆ ಕೊಡುತ್ತಿದ್ದೇವೆ? 98.05 ಲಕ್ಷ ಜನರಿಗೆ ಮೊನ್ನೆವರೆಗೂ ಬಿಪಿಎಲ್ ಕುಟುಂಬಕ್ಕೆ ಅಕ್ಕಿಯನ್ನು ಮತ್ತು ಗೋಧಿಯನ್ನು ಕೊಡಬೇಕಾದ ಅನಿವಾರ್ಯತೆ ಇತ್ತು. ಇದು ಕೇವಲ ನಮ್ಮ ಈ ಸರ್ಕಾರದ್ದಲ್ಲ. 2006ರಲ್ಲಿ ಈ Unit System ನ್ನು ಆಗಿದ್ದಂಥ ಸರ್ಕಾರ ಜಾರಿಗೆ ತಂದಿತು. 2006ರಲ್ಲಿ Unit System ಬರಬೇಕೆಂದು ನಿರ್ಧಾರ ಮಾಡಿದರು. ಏಕೆಂದರೆ ಆಗ ಇದ್ದಂತಹ ಸಂದರ್ಭದಲ್ಲಿ ಏನು Unit System ಜಾರಿಗೆ ತಂದಿದ್ದೇವೆ, ಅದಕ್ಕೂ ಕಾರಣಗಳಿದ್ದವು. ಕಾರಣ ಅಂದರೆ ನಮ್ಮಲ್ಲಿ ಏನು 31.29 ಲಕ್ಷಕ್ಕೆ ಕೊಡಬೇಕಾಗಿತ್ತು, ಅದನ್ನು ನಾವು 98 ಲಕ್ಷ ಕುಟುಂಬಗಳಿಗೆ ಕೊಡಬೇಕಾದಂಥ ಸಂದರ್ಭ ಬಂದ ಕಾರಣಕ್ಕಾಗಿ Unit System ನ್ನು ಆ ಸಂದರ್ಭದಲ್ಲಿ ಜಾರಿಗೆ ತಂದರು. ಆದರೆ ಈಗ ನಾವು ಒಂದು ಅಧ್ಯಯನದ ಮುಖಾಂತರ ಅಕ್ರಮ ಕಾರ್ಡುಗಳನ್ನು ಪತ್ತೆ ಹಚ್ಚುವ ಅಭಿಯಾನವನ್ನು ತೆಗೆದುಕೊಂಡಿದ್ದೇವೆ. ಇದು ನಿಮಗೂ ಗೊತ್ತಿದೆ. ಸಿಟಿಗಳಲ್ಲಿ ಆರ್.ಆರ್.ನಂ. ಗೆ ರೇಷನ್ ಕಾರ್ಡ್‌ನ್ನು ಜೋಡಿಸಬೇಕು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮನೆ ತೆರಿಗೆ ನಂ.ಗೆ ಒಂದು ರೇಷನ್ ಕಾರ್ಡ್‌ನ್ನು ಜೋಡಿಸಬೇಕೆಂಬ ನಿರ್ಧಾರ ತೆಗೆದುಕೊಂಡ ಮೇಲೆ ಈ ಬಿಪಿಎಲ್ ಕುಟುಂಬಗಳ ಸಂಖ್ಯೆ, ಅಂದರೆ ಏನು ಅಕ್ರಮ ಕಾರ್ಡಿನ ಲೆಕ್ಕದಲ್ಲಿ ಯಾರೋ ಅಂಗಡಿಯವರು, ಯಾವುದೋ ಮನೆಯವರು extra ಕಾರ್ಡ್ ಇಟ್ಟುಕೊಂಡು ಮಾಡುತ್ತಿದ್ದರು. ಇದರ ಸಂಖ್ಯೆ ಕಡಿಮೆಯಾಗಿದೆ.

ಸುಮಾರು 14 ಲಕ್ಷ ಕಾರ್ಡುಗಳು cancel ಆಗಿದೆ. 98.5 ಲಕ್ಷಕ್ಕೆ ಬದಲಾಗಿ ನಿನ್ನೆ ಮತ್ತು ಇಂದಿನ ದಿನಾಂಕದ ಪ್ರಕಾರ ನಾವು 84,07,472 ಕುಟುಂಬಕ್ಕೆ ಅಂದರೆ ನಮಗೆ 31 ಲಕ್ಷ ಬಿಪಿಎಲ್ ಕುಟುಂಬಕ್ಕೆ ಬರುವಂಥ ಆಹಾರ ಧಾನ್ಯವನ್ನು ವಿತರಣೆ ಮಾಡಬೇಕಾದಂಥ ಅನಿವಾರ್ಯತೆ ನಮಗೆ ಸೃಷ್ಟಿಯಾಗಿದೆ. ಈ ಕಾರಣಕ್ಕಾಗಿ ಈ ಪದ್ಧತಿಯನ್ನು ನಾವು 2006ರಲ್ಲಿ ಜಾರಿಗೆ ತರಬೇಕಾದ ಅನಿವಾರ್ಯತೆ ಬಂತು.

ಶ್ರೀ ಕೆ.ಎಂ.ಶಿವಲಿಂಗೇಗೌಡ:– ನೀವು ನಿಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕೋಸ್ಕರ, ಕೇಂದ್ರ ಸರ್ಕಾರ 33 ಲಕ್ಷ ಫಲಾನುಭವಿ ಕುಟುಂಬಗಳಿಗೆ ಆಹಾರ ಪದಾರ್ಥ ಕೊಡುತ್ತದೆ. ನಿಮ್ಮ ರಾಜಕೀಯ ಇಚ್ಛಾ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕೋಸ್ಕರ 94 ಲಕ್ಷ ಅಲ್ಲದಿದ್ದರೆ ಇನ್ನು ಒಂದು 50 ಲಕ್ಷ ಮಾಡಿಕೊಳ್ಳಿ. ನಾವು ಅದನ್ನು ಕೇಳುವುದಕ್ಕೆ ಬರುವುದಿಲ್ಲ. ಆದರೆ ಕೇಂದ್ರ ಸರ್ಕಾರ ಕೊಟ್ಟಿರುವುದು ಕಾನೂನಿನ ಚೌಕಟ್ಟಿನೊಳಗೆ ಒಂದು ಬಿಪಿಎಲ್ ಕುಟುಂಬಕ್ಕೆ 35 ಕೆ.ಜಿ. ಅಕ್ಕಿ ಕೊಡಬೇಕು ಎಂದು ತಾಕೀತು ಮಾಡಿದೆ. ನೀವು ಅದನ್ನು Unit System ಹೇಗೆ ಮಾಡಿದ್ದೀರಿ? ಅದಕ್ಕೆ ಕೇಂದ್ರ ಸರ್ಕಾರದ ಅನುಮತಿ ಇದೆಯೇ?

ಕುಮಾರಿ ಶೋಭಾ ಕರಂದ್ಲಾಜೆ:– ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕುಮಾರಸ್ವಾಮಿಯವರು ಇದ್ದಂತಹ ಸಂದರ್ಭದಲ್ಲಿ 2006ರಲ್ಲಿ, ಕುಳಿತುಕೊಳ್ಳಿ ನೀವು, ಅದನ್ನೇ ಹೇಳಬೇಕು, ಇನ್ನೇನು ಹೇಳಬೇಕು? ನಿಮ್ಮ ರಾಜಕೀಯ ಇಚ್ಛೆ ಅಂದರೆ ಯಾರ ರಾಜಕೀಯ ಇಚ್ಛಾ ಶಕ್ತಿ? 2006ರಲ್ಲಿ ನಿಮ್ಮದೇ ರಾಜಕೀಯ ಇಚ್ಛೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ:– ನನಗೆ ಅದು ಗೊತ್ತಿಲ್ಲ

ಕುಮಾರಿ ಶೋಭಾ ಕರಂದ್ಲಾಜೆ:– 2006ರಲ್ಲಿ ಇದ್ದಂತಹ ಸರ್ಕಾರ Unit Systemನ್ನು ಜಾರಿಗೆ ತಂದಿತು. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ...

ಶ್ರೀ ಬಂಡೆಪ್ಪ ಕಾಶೆಂಪೂರ್:– ಆ ಸರ್ಕಾರ, ಈ ಸರ್ಕಾರ ಅನ್ನುವುದಲ್ಲ. ಇವತ್ತು ಏನು ಪ್ರಶ್ನೆ ಬಂದಿದೆ. ಇದರಲ್ಲಿ ನಿಮ್ಮದು ಏನು?

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್:– ಸಾಲ ಮನ್ನಾ ಮಾಡಿದ್ದು ಕುಮಾರಸ್ವಾಮಿಯವರೇ, 2006ರಲ್ಲಿ ರೈತರಿಗೆ ಇಷ್ಟೆಲ್ಲಾ ಕೊಟ್ಟಿದ್ದು ಕುಮಾರಸ್ವಾಮಿಯವರೇ, ನೀವು ಇದ್ದಿರಿ ಅದರಲ್ಲಿ. ಸಚಿವರೇ ಸ್ಪಷ್ಟವಾಗಿ ಹೇಳಿ.

ಕುಮಾರಿ ಶೋಭಾ ಕರಂದ್ಲಾಜೆ:– ನಾನು mention ಮಾಡಿಲ್ಲ. 2006ರಲ್ಲಿ ಇದ್ದ ಸರ್ಕಾರ ಎಂದು ಅವರು mention ಮಾಡಿದ್ದನ್ನು ಹೇಳಿದೆ.

ಶ್ರೀ ಬಂಡೆಪ್ಪ ಕಾಶೆಂಪೂರ್:– ಸಚಿವರು specific ಆಗಿ ಕೇಂದ್ರ ಸರ್ಕಾರ ಪ್ರಕಾರ ಆಹಾರ ಪದಾರ್ಥಗಳನ್ನು distribute ಮಾಡುತ್ತಿದ್ದಾರೆಯೇ? ಕೇಂದ್ರ ಸರ್ಕಾರದ ಆಹಾರ ನೀತಿ ಅದು.

ಅಧ್ಯಕ್ಷರು:– ಬದಲಾವಣೆ ಮಾಡಿದ್ದರು, ಅದನ್ನೇ continue ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ.

ಕುಮಾರಿ ಶೋಭಾ ಕರಂದ್ಲಾಜೆ:– ಇವರೇ ಒಂದು ಸಾರಿ ನಿರ್ಧಾರ ಮಾಡಲಿ. ರಾಜ್ಯ ಸರ್ಕಾರ 31.29 ಲಕ್ಷ ಜನರಿಗೆ ಮಾತ್ರ ರೇಷನ್ ಕೊಡಿ ಎಂದು ಇವರು ನಿರ್ಧಾರ ಮಾಡಿದರೆ...

ಶ್ರೀ ಬಂಡೆಪ್ಪ ಕಾಶೆಂಪೂರ್:– ಎಲ್ಲರಿಗೂ ಕೊಡಿ. ರಾಜ್ಯ ಸರ್ಕಾರದಲ್ಲಿ ದುಡ್ಡಿಲ್ಲವೇ? ಎಲ್ಲರಿಗೂ ಕೊಡಿ. ಯಾಕೆ ಕೊಡಬಾರದು? ಇಚ್ಛಾ ಶಕ್ತಿಯಿಂದ ತಂದು ಕೊಡಿ. ಬಡವರ ಪರವಾಗಿ ಕೊಡಿ.

ಕುಮಾರಿ ಶೋಭಾ ಕರಂದ್ಲಾಜೆ:– 2006ರಲ್ಲಿ ಈ ನಿರ್ಧಾರ ಏಕೆ ತೆಗೆದುಕೊಂಡಿರಿ?

ಶ್ರೀ ಬಂಡೆಪ್ಪ ಕಾಶೆಂಪೂರ್:– ಹೌದು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, 2006ರಲ್ಲಿ ನಾನು Food Minister ಆಗಿದ್ದೆ. ಈ ಬಗ್ಗೆ ನಾನು ಹೇಳುತ್ತೇನೆ. 2006ರಲ್ಲಿ ಹೊಸದಾಗಿ ಅಂದಿನ ಸರ್ಕಾರ ಹೊಸದಾಗಿ ಒಂದು ಬಿಪಿಎಲ್ ಕಾರ್ಡನ್ನು computerised ಕಾರ್ಡುಗಳನ್ನು ಮಾಡಿ ರಿಯಾಯಿತಿ ದರದಲ್ಲಿ ಆಹಾರ ಧಾನ್ಯ ಕೊಡಬೇಕು ಎಂದು ಹೇಳಿ ಒಂದು ತೀರ್ಮಾನ

ತೆಗೆದುಕೊಂಡು ಸರ್ವೆ ಮಾಡಿದ ಸಂದರ್ಭದಲ್ಲಿ ಅತಿ ಹೆಚ್ಚು 32 ಲಕ್ಷ ಕೇಂದ್ರ ಸರ್ಕಾರ ನಮಗೆ ನಿಗದಿಪಡಿಸಿದ್ದರೂ ಕೂಡಾ ರಾಜ್ಯದಲ್ಲಿ ಹೆಚ್ಚು ಬೇಡಿಕೆ ಜನರಿದ್ದಾರೆ. ನಮ್ಮದೇ ಆದ ಮಾನದಂಡ ಇಟ್ಟುಕೊಂಡು ನಾವು ಬಡವರನ್ನು ಗುರುತಿಸುತ್ತೇವೆಂದು ಕುಟುಂಬಗಳನ್ನು ಎಂದು ಹೇಳಿ ನಮ್ಮದೇ ಆದ ಮಾನದಂಡದ ಆಧಾರದ ಮೇಲೆ ಬಿಪಿಎಲ್ ಕುಟುಂಬಗಳನ್ನು ಸರ್ವೆ ಮಾಡಿಸಿದಂಥ ಸಂದರ್ಭದಲ್ಲಿ 65 ಲಕ್ಷ ಕುಟುಂಬಗಳು ಅವತ್ತು ಗುರುತು ಮಾಡಿದಂಥ ಕಾರಣಕ್ಕಾಗಿ ಯಾಕೆ ನಾವು unit system ಜಾರಿಗೆ ತರಬಾರದು? ಎನ್ನುವ ಚಿಂತನೆ ಮಾಡಿದ್ದೇವೆಯೇ ಹೊರತು ಆದೇಶ ಮಾಡಿರಲಿಲ್ಲ. ಆದರೆ, ಅದನ್ನು ಆದೇಶ ಮಾಡಿ ನೀಡುತ್ತಿರುವುದು ತಮ್ಮ ಅವಧಿಯಲ್ಲಿ ಮಾಡುತ್ತಿರುವುದು. ಸರ್ಕಾರಕ್ಕೆ ಇವತ್ತು ಅಧಿಕಾರವಿದೆ. ನೀವು unit system ನ್ನು ರದ್ದುಪಡಿಸಿ, ನಾವು ಮಾಮೂಲಿ 20 ಕೆ.ಜಿ ಕೊಡುತ್ತೇವೆ, 25 ಕೆ.ಜಿ ಕೊಡುತ್ತೇವೆಂದು ಅಥವಾ ಕೇಂದ್ರ ಸರ್ಕಾರದ ನಿಯಮದ ಪ್ರಕಾರವೇ ಕೊಡುತ್ತೇವೆ ಎಂದು ಹೇಳಿ. ನೀವು ಒಂದು ಕಡೆ ಹೇಳಿದ್ದೀರಿ, 1 ಕೋಟಿ 68 ಲಕ್ಷ ಕಾರ್ಡ್ ವಿತರಣೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಇವತ್ತು ಸದನದಲ್ಲಿ 98 ಲಕ್ಷ ಜನರಿಗೆ ಬಿಪಿಎಲ್ ಕಾರ್ಡ್ ಕೊಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಇದಕ್ಕೆ ಒಂದು ಅಳತೆಗೋಲೇ ಇಲ್ಲ food department ಗೆ. ಸುಮ್ಮನೆ ಒಂದು ಕಡೆ ಮರು ಸಮೀಕ್ಷೆ ಎಂದು ಹೇಳುತ್ತೀರಿ, ಒಂದು ಕಡೆ online ಎನ್ನುತ್ತೀರಿ, ಯಾವುದೇ ಒಂದು ಸ್ಪಷ್ಟತೆ ಇಲ್ಲದೆ ಸುಮ್ಮನೆ ಹೇಗೋ ನಡೆದುಕೊಂಡು ಹೋಗುತ್ತಿದೆ. ಇದನ್ನು ಕೇಳುವ ಹಾಗೆ ಇಲ್ಲ, ಹೇಳುವ ಹಾಗೆ ಇಲ್ಲ.

(ಗೊಂದಲ)

ಅಧ್ಯಕ್ಷರು:– ಇದೆಲ್ಲವನ್ನೂ ರಾಜ್ಯಪಾಲರ ಭಾಷಣದಲ್ಲಿ ಮಾತನಾಡಿ. ಎಲ್ಲರೂ ರಾಜ್ಯಪಾಲರ ಭಾಷಣದಲ್ಲಿ ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ನನ್ನ ಮೂಲಭೂತವಾದ ಪ್ರಶ್ನೆಗೆ ಸಚಿವರಿಂದ ಉತ್ತರ ಬರಬೇಕು. ನಮ್ಮದು ಯಾರೋ ಮಾಡಿದಂಥ ಪ್ರಶ್ನೆ ಅಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ರಾಜ್ಯಪಾಲರ ಭಾಷಣದಲ್ಲಿ 1 ಕೋಟಿ 68 ಲಕ್ಷ ಕಾರ್ಡ್ ವಿತರಣೆ ಮಾಡಿದ್ದೇವೆಂದು ಹೇಳುವ ಮಂತ್ರಿಗಳು ಇವತ್ತು 98 ಲಕ್ಷ ಕಾರ್ಡು ವಿತರಣೆ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಅಂದರೆ ಉಳಿದ ಕಾರ್ಡುಗಳಿಗೆ ಆಹಾರ ವಿತರಣೆ ಮಾಡುತ್ತಿದ್ದಾರೋ ಅಥವಾ ಇಲ್ಲವೋ? ಕೇಂದ್ರ ಸರ್ಕಾರ ಕೊಡುವ ಮಾದರಿಯಲ್ಲೇ 32 ಲಕ್ಷ ಜನಕ್ಕೆ ಸೀಮಿತಗೊಳಿಸುವ ಅಧಿಕಾರವೂ ನಿಮಗಿದೆ. ಇಲ್ಲ 98 ಲಕ್ಷ ಜನಕ್ಕೂ 35 ಕೆ.ಜಿ. ಕೊಡುವುದಕ್ಕೆ ನಿಮಗೆ ತೊಂದರೆ ಏನಿದೆ? ಸರ್ಕಾರದಿಂದ ವಿಶೇಷವಾದ ಅನುದಾನ ತೆಗೆದುಕೊಂಡು ಎಲ್ಲರಿಗೂ 35 ಕೆ.ಜಿ. ಅಕ್ಕಿ ವಿತರಣೆ ಮಾಡಿ. ಅದನ್ನು ಬಿಟ್ಟು ಇನ್ನೊಂದು ಸರ್ಕಾರದ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದೀರಿ.

ಅಧ್ಯಕ್ಷರು:– ಈಗ ರಾಜ್ಯಪಾಲರ ಭಾಷಣದಲ್ಲಿ ಎಲ್ಲಾ ವಿವರಗಳಿಗೆ ಹೋಗಿ. ಇದು Question Hour.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಸಭಾಧ್ಯಕ್ಷರೆ, ಪ್ರತಿ ಕುಟುಂಬಕ್ಕೆ 35 ಕೆ.ಜಿ. ಅಕ್ಕಿಯಂತೆ ಒಟ್ಟು 31 ಲಕ್ಷ ಕುಟುಂಬಕ್ಕೆ ಕೇಂದ್ರ ಸರ್ಕಾರದಿಂದ ಬರುತ್ತಿದೆ. ಇಡೀ ರಾಷ್ಟ್ರದಲ್ಲಿ ಪ್ರಥಮವಾಗಿ 2.30 ಪೈಸೆಗೆ ಕೆ.ಜಿ. ಅಕ್ಕಿಯಂತೆ 35 ಕೆ.ಜಿ ಅಕ್ಕಿ ಕೊಡುವಂತೆ ಮಾಡಿದ್ದು ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಾಗ. ಈಗ 65 ಲಕ್ಷ ಕಾರ್ಡ್ ಇದೆ. 65 ಲಕ್ಷ ಕಾರ್ಡ್ ಇದ್ದರೆ ಕೊಡಬೇಡಿ ಎಂದು ರಾಜ್ಯ ಸರ್ಕಾರದವರನ್ನು ಯಾರಾದರೂ ಹಿಡಿದುಕೊಂಡಿದ್ದಾರಾ? ಬೇಕಾದರೆ ತೆಗೆದು ನೋಡಿ ನೀವು. ಹಿಂದೆ ಇದ್ದ ಸರ್ಕಾರಗಳು 100 ಕೋಟಿ, 70 ಕೋಟಿವರೆಗೆ ಸಬ್ಸಿಡಿ ಕೊಟ್ಟು ಅಷ್ಟೂ ಜನರಿಗೆ ಕೊಟ್ಟಂತಹ ಉದಾಹರಣೆಗಳಿವೆ. ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಕೊಟ್ಟಿದ್ದಾರೆ. ತಾವು ದಯಮಾಡಿ ಅದನ್ನು ಕಡತ ತೆಗೆದು ನೋಡಿ. ಕೇಂದ್ರ ಸರ್ಕಾರ ಕೊಟ್ಟಿರುವುದರ ಜೊತೆಗೆ ರಾಜ್ಯ ಸರ್ಕಾರ ಬೇರೆ ಯೋಜನೆಗಳಿಗೆ ಖರ್ಚು ಮಾಡುವ ಬದಲು ನಿಜವಾದ ಬಡವರಿಗೆ ಕೊಡಿ. ನೀವು computerized ಎಂದು ಮಾಡಿದ್ದೀರಿ. ಅದು

ಇನ್ನು 10 ವರ್ಷಗಳಾದರೂ ಆಗುವುದಿಲ್ಲ. ಕರೆಂಟಿನದು ಒಂದು ಕಡೆ ಇರಲಿ. ಮಾನ್ಯ ಸಭಾಧ್ಯಕ್ಷರೆ, food minister correct ಆಗಿ ಎಷ್ಟು ದಿನಗಳಲ್ಲಿ ಕಾರ್ಡ್ ಕೊಡಿಸುತ್ತಾರೆಂದು ಹೇಳಲಿ, 15 ದಿನ ತೆಗೆದುಕೊಳ್ಳಲಿ, ಒಂದು ತಿಂಗಳು ತೆಗೆದುಕೊಳ್ಳಲಿ. ಹಿಂದೆ ಮಹಾತ್ಮಾ ಗಾಂಧಿ ಕಾಲದಿಂದ ಕೊಟ್ಟಿರುವುದು, ಆಗ ಯಾವ ಕಂಪ್ಯೂಟರ್ ಇರಲಿಲ್ಲ.

ಅಧ್ಯಕ್ಷರು:– ರಾಜ್ಯಪಾಲರ ಭಾಷಣದಲ್ಲಿ ಮಾತನಾಡಿ. ಅವಕಾಶವಿದೆ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ:– ಈ ವಿಷಯಕ್ಕೆ ಸಂಬಂಧಪಟ್ಟಂತೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ನನಗೆ ಮಾತನಾಡಲು ಅವಕಾಶ ಕೊಡುತ್ತೀರೋ ಹೇಗೆ. ಪ್ರಶ್ನೆ ಕೇಳಿದ್ದು ನಾನು. ನನ್ನ ಮೂಲಭೂತವಾದ ಪ್ರಶ್ನೆ. ಅವರು ಹೇಳಿದ್ದಕ್ಕೆ ನಾನು clarify ಮಾಡಿದ ನಂತರ ಅವರು ಉತ್ತರ ಕೊಡಬೇಕು. ಅವರು ಹೇಳಿದರು. ನಾವು ಯಾವ ರಾಜಕೀಯ ಇಚ್ಛಾಶಕ್ತಿಯಿಂದ ಮಾಡಿಲ್ಲ ಎಂದು. ಅವರು ಯಾವುದಕ್ಕೆ ಮಾಡಿದರೋ ನನಗೆ ಗೊತ್ತಿಲ್ಲ. ಕಾರ್ಡ್‌ಗಳ ಸಂಖ್ಯೆಯನ್ನು ಅಧಿಕ ಮಾಡಿಕೊಂಡಿದ್ದಾರೆ. ಒಂದು ಬಡ ಕುಟುಂಬಕ್ಕೆ ಕೇಂದ್ರಸರ್ಕಾರದ ಆಹಾರ ಕಾಯಿದೆಯ ನಿಯಮದಡಿ 35 ಕೆ.ಜಿ. ಒಟ್ಟು ಕುಟುಂಬಕ್ಕೆ ಹೋಗಬೇಕೆನ್ನುವುದು ಸಿದ್ಧಾಂತ. ಆ ಸಿದ್ಧಾಂತವನ್ನು ಇವರು ನಮ್ಮಲ್ಲಿ 90 ಲಕ್ಷ ಜನರಿದ್ದಾರೆಂದು ಹೇಳಿ ಆ 35 ಕೆ.ಜಿ. ಅಕ್ಕಿಯನ್ನು ಎಲ್ಲರಿಗೂ ಹಂಚುವ ವ್ಯವಸ್ಥೆ ಮಾಡಿಕೊಂಡಿರುವುದಕ್ಕೆ ಕೇಂದ್ರ ಸರ್ಕಾರದ ಅನುಮತಿ ಇದೆಯೇ? ನಾನು ನಾಳೆ court ಗೆ ಹೋಗುತ್ತೇನೆ. 35 ಕೆ.ಜಿ. ಅಕ್ಕಿ ಕೊಡುವ ಕಡೆ 4 ಕೆ.ಜಿ ಕೊಟ್ಟಿದ್ದಾರೆ. ಈ ಕಾನೂನಿನಡಿಯಲ್ಲಿ ಇಡೀ ಕರ್ನಾಟಕ ರಾಜ್ಯದ ಬಡವರಿಗೆ ಅನ್ಯಾಯವಾಗಿದೆ. ಇದು ಸಾಮಾನ್ಯ ಪ್ರಶ್ನೆಯಲ್ಲ. ಏನೋ 4 ಕೆ.ಜಿ. ಕೊಡುತ್ತೇವೆಂದು ಸುಮ್ಮನೆ ಹೇಳಿ ಹೋಗುವಂಥದ್ದು ಅಲ್ಲ. ಎಷ್ಟು ಯೂನಿಟ್ ಎಂದು ಮಾಡಬೇಕಾದರೆ, ಹೌದು, ನಾವು 33 ಲಕ್ಷ ಜನರಿಗೆ

ಕೊಡುತ್ತೇವೆ, ನೀವು 70 ಸಾವಿರ ಜನಕ್ಕೆ ಬೇಕಾದರೂ ಹಂಚಿಕೊಳ್ಳಿ ಎಂದು ಕೇಂದ್ರ ಸರ್ಕಾರ ನಿಮಗೆ ಅನುಮತಿ ಕೊಟ್ಟಿದೆಯೇ?

ಅಧ್ಯಕ್ಷರು:– ಉತ್ತರ ಹೇಳಲು ಬಿಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಉತ್ತರ ಅಲ್ಲ.

ಅಧ್ಯಕ್ಷರು:– ಆಯಿತು, ಮತ್ತೇನು ಬೇಕು?

ಶ್ರೀ ಕೆ.ಎಂ. ಶಿವಲಿಂಗೇಗೌಡ:– ನಮ್ಮನ್ನು ತೆಗೆದು ಆಚೆ ಹಾಕಿದರೂ ನಾವು ಬಿಡುವುದಿಲ್ಲ. ನ್ಯಾಯ ಸಿಗಲೇ ಬೇಕು ಇದಕ್ಕೆ.

ಕುಮಾರಿ ಶೋಭಾ ಕರಂದ್ಲಾಜೆ:– ಮಾನ್ಯ ಸಭಾಧ್ಯಕ್ಷರೆ, 2–3 ಅಂಶಗಳು ಕಡತದಲ್ಲಿ ತಪ್ಪು ಮಾಹಿತಿಗೆ ಹೋಗಿವೆ. ಒಂದನೆಯದು, ಮಹದೇವ ಪ್ರಸಾದ್ ಅವರು ಹೇಳಿದಂತೆ 2006 ರಲ್ಲಿ ಕಾನೂನು ತಂದೆವು ಎಂದು. ನಾವು ಕಾನೂನು ತಂದಿದ್ದಲ್ಲ. ಆ ವರ್ಷವೇ ಕೊಡಲು unit system ಅನ್ನು ಶುರು ಮಾಡಿದ್ದಾರೆ. ಒಬ್ಬ ವ್ಯಕ್ತಿಗೆ 4 ಕೆ.ಜಿ., 5 ಕ್ಕಿಂತ ಹೆಚ್ಚು ಜನ ಇದ್ದರೆ maximum 20 ಕೆ.ಜಿ. ಎನ್ನುವ unit system ಅನ್ನು 2006 ರಲ್ಲಿ ಜಾರಿಗೆ ತಂದರು. ಎರಡನೆಯದು ಇದು ಎಂದೂ ಕೂಡಾ ಸರಿಯಾಗುವುದಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಸಭಾಧ್ಯಕ್ಷರೆ, ಯಾಕೆ ಇಷ್ಟು ಕಾರ್ಡ್ ಬಂತು? ಇದು ಹಲವಾರು ಬಾರಿ ಚರ್ಚೆಯಾಗಿದೆ. 2006ರಲ್ಲಿ 195 ದಿನಕ್ಕೆ ಕೊಮ್ಯಾಟ್ ಎಂಬ ಒಂದು ಸಂಸ್ಥೆಗೆ bio-metric ತೆಗೆದುಕೊಂಡು ಕಾರ್ಡ್ ಕೊಡಬೇಕಾದ ಒಂದು ಹೊಸ system ಅನ್ನು ತರಬೇಕೆಂದು ಆಗಿನ ಸರ್ಕಾರ ಸನ್ಮಾನ್ಯ ಮಹದೇವ ಪ್ರಸಾದ್ ರವರು ಮಂತ್ರಿಯಾಗಿದ್ದಾಗ ಕೊಟ್ಟರು. ನಾನು ವ್ಯಕ್ತಿಗತವಾಗಿ ಅವರಿಗೆ ಹೇಳುತ್ತಿಲ್ಲ. ಆ ಸಂದರ್ಭದಲ್ಲಿ, ಆದರೆ ಆ ಕೊಮ್ಯಾಟ್ ಸಂಸ್ಥೆ ಏನು ಮಾಡಿತು. Bio-metric ತೆಗೆದುಕೊಳ್ಳುವುದಕ್ಕೆ ಹೋಗಲಿಲ್ಲ. ಅದಕ್ಕೆ ಬದಲಿಗೆ ಸಾಲಿನಲ್ಲಿ ಯಾರ್ಯಾರು ಬಂದರೋ ಅವರಿಗೆಲ್ಲಾ ಕಾರ್ಡ್ ಕೊಟ್ಟರು. ಅವರು 10 ಸಾರಿ ಕ್ಯೂ ನಿಂತರೂ ಅವರಿಗೆ ಕಾರ್ಡ್ ಕೊಟ್ಟರು. 1 ಕೋಟಿ 68 ಲಕ್ಷ ಕಾರ್ಡ್ ಇದರ ಸಲುವಾಗಿ ವಿತರಣೆಯಾಯಿತು. ನಾನು ಮಂತ್ರಿಯಾಗಿ ಬಂದ ಸಂದರ್ಭದಲ್ಲಿ ಇನ್ನೂ ಹತ್ತಾರು ಲಕ್ಷ ಕಾರ್ಡ್‌ಗಳನ್ನು print ಮಾಡಿ

ಇಟ್ಟುಕೊಂಡಿದ್ದರು. 1 ಕೋಟಿ 68 ಲಕ್ಷ ಅಲ್ಲದೆ ಇನ್ನೂ ಹತ್ತಾರು ಲಕ್ಷ ಕಾರ್ಡ್ print ಮಾಡಿ ಇಟ್ಟುಕೊಂಡು ನಮಗೆ permission ಕೊಡಿ ಎಂದು ಕೇಳಿದ್ದರು. ಅಂದರೆ ನಮ್ಮಲ್ಲಿರುವ ಜನಸಂಖ್ಯೆಗೂ ಕೊಟ್ಟಿರುವ ಕಾರ್ಡಿಗೆ ಯಾವುದೇ ರೀತಿಯ ತಾಳ–ಮೇಳ ಇರಲಿಲ್ಲ. 2001ರ ಜನಗಣತಿಯ ಪ್ರಕಾರ 1 ಕೋಟಿ 10 ಲಕ್ಷ ಕುಟುಂಬಕ್ಕೆ ಕೊಡಬೇಕೆಂದು ಇದ್ದದ್ದು. 1 ಕೋಟಿ 68 ಲಕ್ಷ ಕಾರ್ಡ್ ವಿತರಣೆ ಆಗಿದ್ದರೂ ಇನ್ನೂ ಕೊಡಬೇಕೆಂದು ಬಂದಿದ್ದರು. ಇವತ್ತು online system ಮಾಡಿದ್ದೇವೆ. 20 ಲಕ್ಷದ 69 ಸಾವಿರ ಕಾರ್ಡ್ online entry ಆಗಿದೆ. 1 ಕೋಟಿ 68 ಲಕ್ಷ ಕೊಟ್ಟ ಮೇಲೆ 20 ಲಕ್ಷ ಜನರಿಗೆ ಇನ್ನೂ ಕಾರ್ಡ್ ಸಿಕ್ಕಿಲ್ಲ ಎಂದು ಅರ್ಥ. ನಾವು ಅಂದುಕೊಂಡಿದ್ದು 10 ಲಕ್ಷ ಇರಬಹುದು. ನಗರ ಪ್ರದೇಶಗಳಲ್ಲಿ ಅಂತ. ಆದರೆ 20 ಲಕ್ಷ ಜನ entry ಆಗಿದೆ. 1 ಕೋಟಿ 68 ಲಕ್ಷ + 20 ಲಕ್ಷ ಎಂದರೆ ಮಾನ್ಯ ಸಭಾಧ್ಯಕ್ಷರೆ ಒಟ್ಟು ಎಷ್ಟಾಯಿತು ಎಂದು ನೀವೇ ಯೋಚನೆ ಮಾಡಿ. ಈ ರೀತಿ ಅವ್ಯವಸ್ಥೆ ಆ ಸಂದರ್ಭದಲ್ಲಿ Private company ನಿರ್ಮಾಣ ಮಾಡಿದ ಕಾರಣಕ್ಕಾಗಿಯೇ ಆಯಿತು. ಆಗ ನಮ್ಮ ಅಧಿಕಾರಿಗಳಿಗೆ ಇದರಲ್ಲಿ ಯಾವುದೇ ಹಕ್ಕು ಇರಲಿಲ್ಲ. ಯಾರಿಗೆ ಕಾರ್ಡ್ ಕೊಡಬೇಕು. ಅದನ್ನು ಪರಿಶೀಲನೆ ಯಾರು ಮಾಡಬೇಕು? ಯಾರು entry ಮಾಡಬೇಕು? ಎಲ್ಲದನ್ನೂ private company ಅವರಿಗೆ ಕೊಟ್ಟು ಬಿಟ್ಟಿದ್ದರು. ಇದರ ಸಲುವಾಗಿ ನಿಯಮಗಳನ್ನು ರೂಪಿಸುವ ಸಲುವಾಗಿ ಈ entry ಆಯಿತು.

(ಗೊಂದಲ)

ಶ್ರೀ ಶಂಕರಲಿಂಗೇಗೌಡ:– ನಾನು ಕೇಳಿರುವ ಪ್ರಶ್ನೆ ಏನು? ನೀವು ಹೇಳುತ್ತಿರುವ ಉತ್ತರ ಏನು?

ಅಧ್ಯಕ್ಷರು:– ಅವರು ಉತ್ತರ ಹೇಳಲಿ. ಈಗ ಕೆಲವು ಅಂಶಗಳನ್ನು ಎತ್ತಿದ್ದಾರೆ. ಅದಕ್ಕೆ ಉತ್ತರ ಕೊಡಬೇಕಲ್ಲ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ನಾನು ಕೇಳುತ್ತಿರುವ ಪ್ರಶ್ನೆ ಅದಲ್ಲ. ನೀವು ಎರಡು ಲಕ್ಷ ಕಾರ್ಡ್ ಕೊಡಿ. ರಾಜ್ಯದ ಹಿತಾಸಕ್ತಿ ಅದು.

(ಗೊಂದಲ)

ಶ್ರೀ ಅಭಯ್ ಚಂದ್ರ ಜೈನ್:– ನಿಜವಾದ ಬಡವರಿಗೆ ತೊಂದರೆ ಮಾಡಿ, ವೋಟಿಗಾಗಿ ಮಾಡುತ್ತಿದ್ದಾರೆ.

ಡಾ: ಹೆಚ್.ಸಿ. ಮಹದೇವಪ್ಪ:– Half-an-hour discussion ಅವಕಾಶ ಕೊಡಿ.

ಅಧ್ಯಕ್ಷರು:– ಆಯಿತು, ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಇಲ್ಲ. ಇದನ್ನು ನಾನು ಬಿಡುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಅಂಗಾರ ರವರೇ, ಮಾತನಾಡಿ. ಈಗ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಅರ್ಧ ಗಂಟೆ ಚರ್ಚೆಯಲ್ಲ. ಇದಕ್ಕೊಂದು ಉತ್ತರ ಬರಬೇಕು.

ಅಧ್ಯಕ್ಷರು:– ತಾವು ಕುಳಿತುಕೊಳ್ಳಿ. Please.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಹಾಗಾದರೆ ನಾವು ಇಲ್ಲಿ ಪ್ರಶ್ನೆ ಕೇಳುವುದಿಲ್ಲ. ನಾವು ಈ ಸದನಕ್ಕೆ ಬರಬೇಕಾದ ಅವಶ್ಯಕತೆಯೂ ಇರುವುದಿಲ್ಲ.

ಅಧ್ಯಕ್ಷರು:– ಈಗ ಅರ್ಧಗಂಟೆ ಚರ್ಚೆಗೆ ಬೇಡಿಕೆ ಇಟ್ಟಿದ್ದಾರೆ. ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ನಾನು ಕೇಳಿದ ಪ್ರಶ್ನೆ ಏನು? ಅವರೇನು ಉತ್ತರ ಕೊಟ್ಟಿದ್ದಾರೆ? ಅವರು ಯಾರ್ಯಾರು ಎಷ್ಟೆಷ್ಟು ಲಕ್ಷ ಕಾರ್ಡ್ ಹಂಚಿದ್ದಾರೋ ಅವರ ಹಿತಾಸಕ್ತಿ. ಅದನ್ನು ನಾನು ಕೇಳಿಲ್ಲ.

ಅಧ್ಯಕ್ಷರು:– ಮತ್ತೆ ಕೇಳುತ್ತೀರಲ್ಲ. ಇದು ಮುಕ್ತಾಯವಾಗಿದೆ. Please. ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಕೇಂದ್ರ ಸರ್ಕಾರ 33 ಲಕ್ಷ ಕುಟುಂಬಗಳಿಗೆ ಪುಕ್ಕಟೆಯಾಗಿ ಪ್ರತಿ ಕುಟುಂಬಕ್ಕೆ 35 ಕೆ.ಜಿ. ಅಕ್ಕಿ ಕೊಡುತ್ತಾರೆ. 33 ಲಕ್ಷ ಜನಕ್ಕೆ ನೀವು ಯಾಕೆ 35 ಕೆ.ಜಿ. ಅಕ್ಕಿ ಕೊಡದೆ ಅದನ್ನು ಯಾಕೆ 4 ಕೆ.ಜಿ. ಯಂತೆ divide ಮಾಡಿದ್ದೀರಿ? ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಇದೆಯೇ? ಅಷ್ಟನ್ನು ನಾನು ಕೇಳಿದರೆ, ನೀವು ಅದನ್ನು ಬಿಟ್ಟು 2 ಲಕ್ಷ ಆಗಿದೆ ಎಂದರೆ ಹೇಗೆ? 7 ಲಕ್ಷ ಕೊಡಿ. ಅದು ನಿಮ್ಮ ಇಚ್ಛೆ. ಬಂದವರಿಗೆಲ್ಲ ಕಾರ್ಡ್ ಎಂದು announce ಮಾಡಿದರೆ, ಬರದೇ ಎಲ್ಲಿಗೆ ಹೋಗುತ್ತಾರೆ? ನಾನು ನಿಮ್ಮನ್ನು ಅದನ್ನು ಕೇಳುತ್ತಿಲ್ಲ.

(ಗೊಂದಲ)

ಅಧ್ಯಕ್ಷರು:– ಕಾಶೆಂಪೂರ್‌ರವರೆ, ನೀವು ಅರ್ಧ ಗಂಟೆ ಚರ್ಚೆಗೂ ಕೇಳುತ್ತೀರಿ. ಉತ್ತರ ಕೊಡಿ ಎಂದೂ ಕೇಳುತ್ತೀರಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– 35 ಕೆ.ಜಿ. ಕೊಡುವ ಆ ಬಡಪಾಯಿಗೆ ಏಕೆ ಮೋಸ ಮಾಡುತ್ತೀರಿ?

(ಗೊಂದಲ)

ಅಧ್ಯಕ್ಷರು:– ಅರ್ಧ ಗಂಟೆ ಚರ್ಚೆಗೂ ಕೇಳುತ್ತೀರಿ. ಉತ್ತರ ಕೊಡಿ ಎಂದೂ ಕೇಳುತ್ತೀರಿ. ಹೇಗೆ ಇದು?

(ಗೊಂದಲ)

ಅಧ್ಯಕ್ಷರು:– ಅರ್ಧ ಗಂಟೆ ಚರ್ಚೆಗೆ ಅವಕಾಶ ನೀಡಿ ಎಂದು ಕೇಳಿದವರು ನೀವೆ, ಈಗ ಉತ್ತರ ಕೊಡಿ ಎನ್ನುತ್ತಿರುವವರು ನೀವೆ. ಹೇಗಿದು? ನಿಮ್ಮ Deputy Leader ರವರೇ ಹೇಳಿದ್ದಾರೆ. ಅರ್ಧ ಗಂಟೆ

ಚರ್ಚೆಗೆ ಅವಕಾಶ ಕೊಡಿ ಎಂದು ಕೇಳಿದ್ದೀರಿ. ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಅನಂತರ ತೆಗೆದುಕೊಳ್ಳೋಣ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ನೀವು ಮೋಸ ಮಾಡುತ್ತಿದ್ದೀರಿ. ಯಾರು ಮಾಡುತ್ತಿದ್ದೀರೋ ನನಗೆ ಗೊತ್ತಿಲ್ಲ.

ಕುಮಾರಿ ಶೋಭಾ ಕರಂದ್ಲಾಜೆ:– ಕುಮಾರಸ್ವಾಮಿಯವರು ಮಾಡಿದ್ದು ಇದನ್ನು.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಯಾರ್ಯಾರು ಮಾಡಿದ್ದಾರೋ ನನಗೆ ಗೊತ್ತಿಲ್ಲ. ನೀವು ಈ ರಾಜ್ಯದ ಬಡ ಜನತೆಗೆ ಮೋಸ ಮಾಡಿದ್ದೀರಿ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ನೀವು ಕುಮಾರಸ್ವಾಮಿಯವರ ಹೆಸರನ್ನು ಯಾಕೆ ಹೇಳುತ್ತೀರಿ? ನಮ್ಮದು ಬಡವರ ಪರವಾದ ಸರ್ಕಾರ ಎಂದು ಹೇಳುತ್ತೀರಿ. ನೀವು ಅದನ್ನು ಸರಿ ಮಾಡಿ. ಬಡವರ ಪರವಾದ ಸರ್ಕಾರ ನಿಮ್ಮದು. ಅಕ್ಕಿ ಕೊಡುತ್ತೇವೆ, ರೇಷನ್ ಕೊಡುತ್ತೇವೆ ಎಂದು ಹೇಳುತ್ತೀರಿ, ನೀವು ಸರಿ ಮಾಡಿ. ಅದನ್ನು ಬಿಟ್ಟು ಕುಮಾರಸ್ವಾಮಿಯವರ ಹೆಸರನ್ನು ಏಕೆ ಹೇಳುತ್ತೀರಿ? ನಿಮ್ಮ ಕೈಯ್ಯಲ್ಲಿ ಮಾಡಲು ಆಗದಿದ್ದಕ್ಕೆ ಅವರ ಹೆಸರನ್ನು ಏಕೆ ಹೇಳುತ್ತೀರಿ? ನಿಮ್ಮ ಕೈಯ್ಯಲ್ಲಿ ಮಾಡುವುದಕ್ಕೆ ಆಗದೇ ಇರುವುದನ್ನು ಕುಮಾರಸ್ವಾಮಿಯವರ ಮೇಲೆ ಏಕೆ ಹೇಳುತ್ತೀರಿ?

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ:– ಅಧ್ಯಕ್ಷರೆ, ಈಗ ನೇರವಾಗಿ ಪ್ರಶ್ನೆ ಕೇಳಿದ್ದಾರೆ. ಈಗ ಬಡತನ ರೇಖೆಗಿಂತ ಕೆಳಗಡೆ ಇರುವವರ ಸಂಖ್ಯೆ 30 ಸಾವಿರ ಬಿಪಿಎಲ್ ಕಾರ್ಡಿಗೆ ಕೇಂದ್ರ ಸರ್ಕಾರ ನಿರ್ಧಾರ ಮಾಡಿ ಅದಕ್ಕೆ 7 ಕೆ.ಜಿ. ಗೋಧಿ, 27–28 ಕೆ.ಜಿ. ಅಕ್ಕಿಯನ್ನು ಈಗ ಕೊಡುತ್ತಿದ್ದಾರೆ. ಕೇಂದ್ರ ಸರ್ಕಾರ ನಿಗದಿ ಮಾಡಿರತಕ್ಕಂತಹ ಬಡತನ ರೇಖೆಗಿಂತ ಕೆಳಗಡೆ ಇರುವಂತಹದು ಇದೆ, ಅದನ್ನು ಕೊಡಿ.

ಅಧ್ಯಕ್ಷರು:– ಅರ್ಧ ಗಂಟೆ ಚರ್ಚೆಗೆ ಅವಕಾಶ ನೀವೇ ಕೇಳಿ ಮತ್ತೆ ನೀವೇ ಪ್ರಶ್ನೆ ಕೇಳುತ್ತಿದ್ದೀರಲ್ಲ.

ಡಾ: ಹೆಚ್.ಸಿ. ಮಹದೇವಪ್ಪ:– Over and above whatever programmes, the State Government from time to time announce ಮಾಡುತ್ತಾರೆ.

ಅಧ್ಯಕ್ಷರು:– ಡಾಕ್ಟರ್ ಅವರೇ, ಇದು ಸರಿಯಲ್ಲ. ನೀವೇ ಅರ್ಧ ಗಂಟೆಗೆ ಅವಕಾಶ ಕೇಳಿ ಈಗ ಪುನಃ ಚರ್ಚೆ ಮಾಡುವುದು ಹೇಗೆ? ನಾನು ವಿಷಯ ಮುಕ್ತಾಯ ಮಾಡಿದ್ದೇನೆ.

ಡಾ: ಹೆಚ್.ಸಿ. ಮಹದೇವಪ್ಪ:– ಈಗ ಕೇಂದ್ರ ಸರ್ಕಾರ ಏನು ಕೊಟ್ಟಿದೆ, ಅದನ್ನು ಕೊಡಬೇಕೆಂದು ಹೇಳಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಅಧ್ಯಕ್ಷರು:– ನೀವು ಅರ್ಧ ಗಂಟೆ ಚರ್ಚೆಗೆ ಅವಕಾಶ ಕೇಳಿದ್ದೀರಿ. ಕೇಳಿ ಆದ ಮೇಲೆ ಪುನಃ ಏಕೆ ಕೇಳುತ್ತೀರಿ?

ಡಾ: ಹೆಚ್.ಸಿ. ಮಹದೇವಪ್ಪ:– This is Public Distribution System and it is a very important issue.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:– ಚರ್ಚೆ ಯಾವಾಗ ಬೇಕಾದರೂ ಮಾತನಾಡಬಹುದು, ಮಾನ್ಯ ಸದಸ್ಯರ ಪ್ರಶ್ನೆಗೆ ಸ್ಪಷ್ಟೀಕರಣ ಕೊಡಲಿ.

ಡಾ: ಹೆಚ್.ಸಿ. ಮಹದೇವಪ್ಪ:–Sir, this is a vital issue.

ಅಧ್ಯಕ್ಷರು:– ಚರ್ಚೆಗೆ ಅವಕಾಶ ಕೊಟ್ಟಿದ್ದೇನೆಂದರೂ ಸಹ ಧರಣಿಗೆ ಬರುತ್ತಾರಲ್ಲ?

ಶ್ರೀ ಹೆಚ್.ಸಿ. ಬಾಲಕೃಷ್ಣ:– ಅಧ್ಯಕ್ಷರೆ, ಅವರ ಪ್ರಶ್ನೆಗೆ specific ಉತ್ತರ ಕೊಡಲಿ.

ಅಧ್ಯಕ್ಷರು:– ನೀವು ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ ಎಂದು ಕೇಳಿದ್ದೀರಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ:– ಕೇಂದ್ರ ಸರ್ಕಾರದ ಅನುಮತಿ ಇದೆಯೋ ಇಲ್ಲವೋ ಅಷ್ಟು ಹೇಳಿ ಬಿಟ್ಟರೆ ಸಾಕು.

(ಮಾನ್ಯ ಸದಸ್ಯರಾದ ಶ್ರೀ ಕೆ.ಎಂ. ಶಿವಲಿಂಗೇಗೌಡ ಅವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು:– ಈಗ ಅರ್ಧ ಗಂಟೆ ಚರ್ಚೆ ಬೇಡ ಎನ್ನುವವರೂ ನೀವೆ. ಇದು ಹೇಗೆ?

ಶ್ರೀ ಹೆಚ್.ಸಿ. ಬಾಲಕೃಷ್ಣ:– ಅವರು ಪ್ರಶ್ನೋತ್ತರದಲ್ಲಿ ಕೇಳಿರುವುದು. ಅವರು ಪ್ರಶ್ನೆ ಕೇಳಿರತಕ್ಕದ್ದು.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು:– ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಟ್ಟಿದ್ದಾರಲ್ಲ?

ಅಧ್ಯಕ್ಷರು:– ಅರ್ಧ ಗಂಟೆ ಚರ್ಚೆಗೆ ನೀವೇ ಅವಕಾಶ ಕೇಳಿದ್ದು.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಅರ್ಧ ಗಂಟೆ ಚರ್ಚೆಯಲ್ಲಿ ಅವಕಾಶ ಕೊಡಿ. ಈಗ ಅವರ ಪ್ರಶ್ನೆ ಇಷ್ಟೇ. ಕೇಂದ್ರ ಸರ್ಕಾರದ ಅನುಮತಿ ಇದೆಯೇ ಇಲ್ಲವೋ ಎಂದು ಮಂತ್ರಿಗಳು ಹೌದು ಎಂದರೆ ಹೌದು ಎಂದು ಇಲ್ಲ ಎಂದರೆ ಇಲ್ಲ ಎಂದು ಹೇಳಬೇಕು, ಅಷ್ಟೇ, ಅಷ್ಟು ಹೇಳಲಿ ಸಾಕು.

ಕುಮಾರಿ ಶೋಭಾ ಕರಂದ್ಲಾಜೆ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಇಂಧನ ಸಚಿವರು):– ಕೇಂದ್ರ ಸರ್ಕಾರ ಕೇವಲ 31.5 ಲಕ್ಷ ಜನರಿಗೆ ಮಾತ್ರ ಪಡಿತರ ಕೊಡಲು ಬಿಪಿಎಲ್ ಕುಟುಂಬ ಎಂದು ಹೇಳಿದೆ.

ಅಧ್ಯಕ್ಷರು:– ಇಲ್ಲಿ ಕೇಳಿ. ನೀವು ಕೇಳಿದ ಹಾಗೆಯೇ ಉತ್ತರ ಕೊಡಬೇಕೆಂದರೆ ಅದು ಆಗುವುದಿಲ್ಲ.

ಕುಮಾರಿ ಶೋಭಾ ಕರಂದ್ಲಾಜೆ:– ಇನ್ನು ಹೆಚ್ಚುವರಿ ಬಿಪಿಎಲ್ ಕಾರ್ಡ್ ಕೊಡಲು ಅವಕಾಶ ಇಲ್ಲ ಅಧ್ಯಕ್ಷರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಈಗ ಕೇಂದ್ರ ಸರ್ಕಾರದ ಅನುಮತಿ ಇದೆಯೋ ಇಲ್ಲವೋ ಅಷ್ಟು ಹೇಳಲಿ ಸಾಕು.

ಅಧ್ಯಕ್ಷರು:– You can not force. ನೀವು ಹಾಗೆ ಒತ್ತಾಯ ಮಾಡಲು ಬರುವುದಿಲ್ಲ. ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಅಲ್ಲಿಂದ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೇಳಿದವರೂ ನೀವೆ,

(ಗೊಂದಲ)

ಅಧ್ಯಕ್ಷರು:– ಅದಕ್ಕೆ ವಿವರಣೆಯನ್ನು ಕೊಟ್ಟಿದ್ದಾರೆ. ಮಾನ್ಯ ಶಿವಲಿಂಗೇ ಗೌಡರೇ ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್:– ಉತ್ತರ ಹೇಳುತ್ತಿದ್ದಾರೆ, ದಯವಿಟ್ಟು ತಮ್ಮ ಸ್ಥಳಕ್ಕೆ ಹೋಗಿ.

ಕುಮಾರಿ ಶೋಭಾ ಕರಂದ್ಲಾಜೆ:– ನಾನು ನಮ್ಮ ರಾಜ್ಯದಲ್ಲಿ Unit System ಅನ್ನು ಪ್ರಾರಂಭ ಮಾಡಿದ್ದೇವೆ.

ಅಧ್ಯಕ್ಷರು:– ಮಾನ್ಯ ಶಿವಲಿಂಗೇ ಗೌಡರೇ, ತಾವು ತಮ್ಮ ಸ್ಥಾನಕ್ಕೆ ಹೋಗಿ, ಇಲ್ಲಿ ಮಾತನಾಡಬೇಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಈಗ ಅವರ ಪ್ರಶ್ನೆಗೆ ಹೌದು ಅಥವಾ ಇಲ್ಲ ಎಂದು ಉತ್ತರ ಕೊಡಲಿ. ಮಾನ್ಯ ಶಿವಲಿಂಗೇಗೌಡರೇ, ನಿಮ್ಮ ಸ್ಥಾನಕ್ಕೆ ಹೋಗಿ ಉತ್ತರ ಕೊಡುತ್ತಾರೆ.

(ಮಾನ್ಯ ಸದಸ್ಯರಾದ ಶ್ರೀ. ಕೆ.ಎಂ. ಶಿವಲಿಂಗೇಗೌಡ ಅವರು ತಮ್ಮ ಸ್ಥಾನಕ್ಕೆ ತೆರಳಿದರು)

ಕುಮಾರಿ ಶೋಭಾ ಕರಂದ್ಲಾಜೆ:– ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ ಕೇವಲ 32 ಲಕ್ಷ ಜನರಿಗೆ ಮಾತ್ರ ಬಿಪಿಎಲ್ ಕುಟುಂಬ ಎಂದು ಹೇಳಿ ನಮಗೆ 29 ಕೆ.ಜಿ. ಅಕ್ಕಿ 6 ಕೆ.ಜಿ. ಗೋಧಿಯನ್ನು ಕೊಡುತ್ತಿರುವುದು. ಆದರೆ ನಮ್ಮ ರಾಜ್ಯದಲ್ಲಿ ಬಿಪಿಎಲ್ ಕುಟುಂಬ ಜಾಸ್ತಿ ಇದೆ ಎನ್ನುವಂತಹದ್ದನ್ನು ನಾವು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಹೆಚ್ಚು ಕುಟುಂಬಗಳು ನಮ್ಮ ರಾಜ್ಯದಲ್ಲಿ ಇದ್ದಾವೆ, ನಾವು 98 ಲಕ್ಷ ಜನರಿಗೆ ಬಿಪಿಎಲ್ ಕೊಡಬೇಕು ಎಂದು ಹೇಳಿದ್ದೇವೆ. ಆದರೆ ಈ ವಿಷಯವನ್ನು ನಾವು ಕೇಂದ್ರ ಸರ್ಕಾರದ ಗಮನಕ್ಕೆ ತಂದೆವು. ನಮ್ಮ ರಾಜ್ಯದಲ್ಲಿ Unit System ಅನ್ನು ಜಾರಿಗೆ ತಂದಿದ್ದೇವೆ. Unit System ಜಾರಿಯಿಂದ ನಾವು

ನಮ್ಮ ರಾಜ್ಯದಲ್ಲಿ ಒಬ್ಬ ವ್ಯಕ್ತಿಗೆ 4 ಕೆ.ಜಿ.ಯಂತೆ 20 ಕೆ.ಜಿ.ಗೆ ಸೀಮಿತ ಮಾಡಿದ್ದೇವೆ ಎನ್ನುವುದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ.

ಅಧ್ಯಕ್ಷರು:– ಅವರು ಸ್ಪಷ್ಟವಾಗಿ ಉತ್ತರ ಹೇಳಿದ್ದಾರೆ. ಈ ತರಹ ಮಾಡಿದರೆ ಹೇಗೆ?

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಕೇಂದ್ರ ಸರ್ಕಾರ ಅನುಮತಿ ಕೊಟ್ಟಿಲ್ಲ. ಇವರು ಅವರ ಗಮನಕ್ಕೆ ತಂದಿದ್ದಾರೆ ಅಷ್ಟೇ, ಕೇಂದ್ರ ಸರ್ಕಾರ ಅನುಮತಿ ಕೊಟ್ಟಿದೆ ಎಂದು.

(ಗೊಂದಲ)

ಕುಮಾರಿ ಶೋಭಾ ಕರಂದ್ಲಾಜೆ:– ಅದರ ಜೊತೆಗೆ ಇವತ್ತು 98 ಲಕ್ಷದಲ್ಲಿ ಕೇವಲ 39 ಲಕ್ಷ ಜನರಿಗೆ ಕೊಟ್ಟಂತಹ ಅಕ್ಕಿ, ಗೋಧಿ ವಿತರಣೆ ಆಗುವಂತಹದ್ದಲ್ಲ, ನಮ್ಮ ರಾಜ್ಯದಲ್ಲಿ ನಾವು 9 ರೂಪಾಯಿಯಲ್ಲಿ ಮತ್ತು 12 ರೂಪಾಯಿಯಲ್ಲಿ ಒಂದು ಕೆ.ಜಿ.ಗೆ ಅಕ್ಕಿಯನ್ನು ತಂದು ಸುಮಾರು ಮೂರು ರೂಪಾಯಿಗೆ ಕೊಡುತ್ತಿದ್ದೇವೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಈಗ ನಿಮಗೆ ಬಹಳ ತೊಂದರೆ ಇದೆ. ಎರಡು ಬಹಳ ಮುಖ್ಯವಾದಂತಹ ಇಲಾಖೆಗಳು ನಿಮಗಿದೆ. ಎರಡೂ ಕೂಡ ಬಹಳ problematic ಇರತಕ್ಕಂತಹದ್ದು, ಒಂದು ನೀವು Energy Minister ಇದ್ದೀರಿ. ಅದೇ Power Problem ಹೇಗಿದೆ ಎನ್ನುವುದು ಗೊತ್ತು. ಜೊತೆಗೆ Food & Civil Supplies ಖಾತೆ ಕೂಡ ತೆಗೆದುಕೊಂಡಿದ್ದೀರಿ. ಈಗ ಇಲ್ಲಿ ಒಂದು ವಿಚಾರ ಇದೆ. ನಾನು ಕೂಡ Public Distribution System ನ ರಾಜ್ಯ ಸಚಿವನಾಗಿದ್ದವನು. ನಾವು ಇಡೀ ದೇಶಕ್ಕೆ ಒಂದು uniform policy ಮಾಡಿದ್ದೆವು ಎಂದು ಹೇಳಿದರೆ ಒಂದು Experts Committee ಮಾಡಿರುತ್ತೇವೆ. Professor ಎಂದು ಹೇಳಿ ಅವರ ಮುಖಂಡತ್ವದಲ್ಲಿ ಒಂದು ಸಮಿತಿ ಮಾಡಿದ್ದೆವು. ಇಡೀ ದೇಶದಲ್ಲಿ ಎಲ್ಲಾ ರಾಜ್ಯಗಳಲ್ಲೂ ಕೂಡ ನಾವು ಕರ್ನಾಟಕ ರಾಜ್ಯದಲ್ಲಿ below poverty line ಎಷ್ಟು ಇದ್ದಾರೆ ಎಂದು ನಾವು ಅಸೆಸ್ ಮಾಡಲು ನಮ್ಮದೇ ಆದಂತಹ yardstick ಇಟ್ಟುಕೊಂಡು ನಾವು ಮಾಡಿರುತ್ತೇವೆ. ಅದರಲ್ಲಿ ಇಷ್ಟು ಲಕ್ಷ

ಜನ below poverty line ಇದ್ದಾರೆ, they are deserving for holding BPL Card ಎಂದು ನಾವು ಮಾಡಿದ್ದೆವು. ಅದರ ಮೇಲೆ ನೀವು ಏನು ಮಾಡುತ್ತೀರಿ ಎಂದರೆ ನಮ್ಮ ಮಾನ್ಯ ಮಹದೇವ್ ಪ್ರಸಾದ್ ಅವರು ಹೇಳಿದ ಹಾಗೆ ಚುನಾವಣೆ ಸಮಯದಲ್ಲಿ ಏನು ಮಾಡುತ್ತೀರಿ ಎಂದರೆ ಈ below poverty line ನಲ್ಲಿ ಕೇಂದ್ರ ಸರ್ಕಾರದಿಂದ identification ಆಗಿರುತ್ತದೆ, ಅಷ್ಟಕ್ಕೆ ಮಾತ್ರ ಕೊಡತಕ್ಕಂತಹದ್ದು. ಅದರ ಮೇಲೆ ನೀವು ಚುನಾವಣೆಯಲ್ಲಿ ಪ್ರಚಾರಕ್ಕೋಸ್ಕರ ವಿಪರೀತ ಸಿಕ್ಕ ಸಿಕ್ಕವರಿಗೆ ಎಲ್ಲರಿಗೂ ಇದರಲ್ಲಿ ಕೊಟ್ಟಂತಹದನ್ನು ಕೊಟ್ಟು ಬಿಟ್ಟಿರಿ. ಅದರಲ್ಲಿ ಏನೆಂದರೆ ಒಂದು ಚೀಟಿ ಗುರುತು ಹಾಕಿದವರಿಗೆಲ್ಲಾ ಕೊಟ್ಟು ಬಿಟ್ಟಿರಿ. ನಿಮಗೆ over-burden ಆಗಿದೆ. ನೀವು ಅಷ್ಟನ್ನು ಮಾಡುವುದಕ್ಕೆ ಆಗುವುದಿಲ್ಲ. ನೀವು open market ನಲ್ಲಿ ಕೊಂಡು ಅದನ್ನು subsidised rate ನಲ್ಲಿ ಹೆಚ್ಚುವರಿಯಾಗಿ 20 ಲಕ್ಷ 30 ಲಕ್ಷ ಮಾಡುತ್ತೀರಿ, ಅದನ್ನು ನೀವು ಮಾಡುವುದಕ್ಕೆ ಆಗದೇ ಅದರಲ್ಲಿ ಈಗ ಇರತಕ್ಕದ್ದರಲ್ಲಿ ಮಿಸ್ ಮಾಡಿದ್ದೀರಿ. ಆಮೇಲೆ ಅದನ್ನು ಏನು ಮಾಡಬೇಕೆಂದು ಒದ್ದಾಡುತ್ತಿದ್ದೀರಿ. ನೀವು ಒಂದು ಕಡೆ ಕೊಟ್ಟು ಬಿಟ್ಟಿರುತ್ತೀರಿ, ಅದನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಮತ್ತೆ ಇದರಲ್ಲಿ ಗೊಂದಲ ಮಾಡಿ ಇಡೀ Public Distribution System ಒಂದು ರೀತಿ ಹಾಳಾಗಿ ಬಿಟ್ಟಿರತಕ್ಕದ್ದು, ಹಾಗಾಗಿ ನೀವೇನು ಈಗ ಮಾಡಲಿಕ್ಕೆ ಹೋಗಿದ್ದೀರಿ, ಅದನ್ನು ಸ್ವಲ್ಪ ground realities ಮೇಲೆ ಸರಿಯಾದ ರೀತಿಯಲ್ಲಿ ಅದನ್ನು ವಿತರಣೆ ಮಾಡತಕ್ಕದ್ದನ್ನು ನೀವು ಯೋಚನೆ ಮಾಡಿ ಮಾಡಿದರೆ ಏನಾದರೂ ಸಾಧ್ಯವಾಗುತ್ತದೆ. ಅಷ್ಟಕ್ಕೋಸ್ಕರ ಪ್ರಶ್ನೆ ಇಲ್ಲಿ ಬಂದಿರತಕ್ಕದ್ದನ್ನು ಅವರು ಕೇಳುತ್ತಿದ್ದಾರೆ. ಹೇಳಿ, ಬಹುಶಃ ನಿಮಗೂ ಕಷ್ಟವೇ ಎರಡು portfolio ಇಟ್ಟುಕೊಂಡು ಕೆಲಸ ಮಾಡಬೇಕು. ಅದರ ಜೊತೆಗೆ ನೀವು ನಿಮ್ಮ ಪಾರ್ಟಿಯಲ್ಲಿರತಕ್ಕಂತಹ ಆಂತರಿಕ ವ್ಯವಹಾರದಲ್ಲಿ ಕೂಡ ಹೋಗಿ ಇದರ ಬಗ್ಗೆ ನೀವು ಅಷ್ಟು ಗಮನ ಕೊಡುವುದಕ್ಕೆ ಆಗುತ್ತಿಲ್ಲ. ಸ್ವಲ್ಪ ಹಾಗಾಗಿ ನೀವು ಇದರ ಬಗ್ಗೆ ಇನ್ನೂ ಆಲೋಚನೆ ಸರಿಯಾಗಿ ಮಾಡುವಂತಹದ್ದು ಒಳ್ಳೆಯದು ಇಂದು ಹೇಳುತ್ತೇನೆ.

ಅಧ್ಯಕ್ಷರು:– ಅವರು ಉತ್ತರ ಹೇಳಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಕಾನೂನು ಇರುವುದು.....

ಅಧ್ಯಕ್ಷರು:– ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೇನೆ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಎ.ರಾಮದಾಸ್ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು):– ಅವರು ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು:– ಹೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಶಿವಲಿಂಗೇ ಗೌಡರು ಪ್ರಶ್ನೆ ಕೇಳಿದ್ದಾರೆ. ದಯಮಾಡಿ ನಿನ್ನೆ ನೀವೇ ನೋಡಿದ್ದೀರಿ. ಪೂರ್ತಿ ಒಂದು ದಿನ ಸದನವೆಲ್ಲಾ ಕಳೆದಿದ್ದೇವೆ. ಇಂತಹ ಒಂದು ಪ್ರಶ್ನೆಗೆ ಉತ್ತರ ಕೊಡಿಸುವುದಕ್ಕೆ ಹಿಂಜರಿಯುತ್ತಿದ್ದೀರಿ. ದಯಮಾಡಿ ಇದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು:– ಈಗ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೇಳಿದವರೂ ನೀವೆ, ಅದಕ್ಕೆ ಅವಕಾಶ ಕೊಟ್ಟಿದ್ದೇನೆ. ಈಗ ಮತ್ತೆ ಮತ್ತೆ ಅದನ್ನೇ ಕೇಳುವುದಾದರೆ ಹೇಗೆ?

ಶ್ರೀ ಗೋವಿಂದ ಕಾರಜೋಳ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು):– ಒಬ್ಬ ವ್ಯಕ್ತಿ ಇರತಕ್ಕ ಕುಟುಂಬಕ್ಕೂ ಒಂದು ಕಾರ್ಡು, ಹತ್ತು ಜನ ಇರತಕ್ಕ ಕುಟುಂಬಕ್ಕೂ ಒಂದು ಕಾರ್ಡು. ಒಂದು ಜನ ಇರತಕ್ಕವರಿಗೂ 35 ಕೆ.ಜಿ. ಅಕ್ಕಿ, ಒಂದು ಜನ ಇರುವವನೂ 35 ಕೆ.ಜಿ. ಅಕ್ಕಿ ತೆಗೆದುಕೊಳ್ಳುವುದು ಯಾವ ನ್ಯಾಯ? ಆ ಕಾರಣಕ್ಕಾಗಿ ಹಿಂದಿನ ಸರ್ಕಾರ ಆಡಳಿತಾತ್ಮಕವಾದ ವ್ಯವಸ್ಥೆ ಮಾಡಿತ್ತು. ಎಲ್ಲದಕ್ಕೂ ಕೇಂದ್ರ ಸರ್ಕಾರದ ಪರ್ಮಿಷನ್ ತೆಗೆದುಕೊಳ್ಳಬೇಕಾಗಿಲ್ಲ. ರಾಜ್ಯ ಸರ್ಕಾರದ...

(ಗೊಂದಲ)

ಶ್ರೀ ಗೋವಿಂದ ಕಾರಜೋಳ:– ದಯವಿಟ್ಟು ಕೂಡಿ. ನಾನು ಮುಗಿಸುವವರೆಗೂ ದಯವಿಟ್ಟು ಕೂಡಿ, yield ಆಗಿ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ನೀವು ಅದನ್ನು ಹೇಳಿ. ಸುಮ್ಮನೇ ವಿಷಯವನ್ನು ಏಕೆ divert ಮಾಡುತ್ತೀರಿ? ಎಲ್ಲರೂ ವಿಷಯ divert ಮಾಡುತ್ತಾರೆ.

ಶ್ರೀ ಗೋವಿಂದ ಕಾರಜೋಳ:– ಇದು ರಾಜ್ಯ ಸರ್ಕಾರ ತೆಗೆದುಕೊಂಡಂತಹ ನಿರ್ಣಯ. ಒಬ್ಬ ಮನುಷ್ಯ ಇರತಕ್ಕವನಿಗೂ ಒಂದು ಬಿಪಿಎಲ್ ಕಾರ್ಡು, ಹತ್ತು ಜನ ಇರತಕ್ಕವರಿಗೂ ಒಂದು ಬಿಪಿಎಲ್ ಕಾರ್ಡು, ಒಬ್ಬ ವ್ಯಕ್ತಿ ಇರತಕ್ಕವನಿಗೂ 35 ಕೆ.ಜಿ. ಅಕ್ಕಿ, ಹತ್ತು ಜನ ಇರತಕ್ಕವರಿಗೂ 35 ಕೆ.ಜಿ ಅಕ್ಕಿ. ಇದು ಸರಿಯಾದಂತಹ ವ್ಯವಸ್ಥೆ ಅಲ್ಲ. ನೀವು ಕೇಳಿ, ಕೇಳದಿದ್ದರೆ ನಾವು ಹೇಗೆ ಉತ್ತರ ಕೊಡಲು ಸಾಧ್ಯವಾಗುತ್ತದೆ? ನೀವು ಕೇಳಿ, ಆಮೇಲೆ ನಿಮ್ಮ ವಿಚಾರ ಇದ್ದರೆ ಹೇಳಿ. ಈ ನಿರ್ಣಯದ ಕಾರಣಕ್ಕಾಗಿ ಕರ್ನಾಟಕ ಸರ್ಕಾರ ಅಂದು ಯಾರೇ ಆಡಳಿತದಲ್ಲಿರಬಹುದು. ತೆಗೆದುಕೊಂಡಂತಹ ನಿರ್ಣಯ. ಈ ನಿರ್ಣಯಕ್ಕೆ ನೀವು ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯಬೇಕಾಗಿಲ್ಲ. ಆಡಳಿತಾತ್ಮಕವಾದಂತಹ ವ್ಯವಸ್ಥೆ ಮಾಡತಕ್ಕಂತಹದ್ದು ಈ ಸರ್ಕಾರಕ್ಕೆ ಇರತಕ್ಕಂತಹದ್ದು. ಅದರಲ್ಲಿ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಕೇಂದ್ರ ಸರ್ಕಾರ ಎಷ್ಟು ಕೊಟ್ಟರೋ, ರಾಜ್ಯ ಸರ್ಕಾರ ಎಷ್ಟು ಹಣ ಕೊಟ್ಟರೋ ಅದು ಮುಖ್ಯವಲ್ಲ. ಇಲ್ಲಿ ಎಲ್ಲರಿಗೂ ಕೂಡ ಸಿಗಬೇಕು ಎನ್ನುವ ಉದ್ದೇಶದಿಂದ ಮಾಡಿರುವಂತಹ ಒಂದು ವ್ಯವಸ್ಥೆ. ನಾವು ಪ್ರಾಮಾಣಿಕವಾಗಿ ಹೇಳುತ್ತೇವೆ. ಇವರು ಎಲ್ಲರೂ ಹೇಳಲಿ, card cancel ಮಾಡುವುದಕ್ಕೆ ಹೇಳುತ್ತಾರೆ? ಇಷ್ಟೆಲ್ಲಾ ಮಾತನಾಡುತ್ತೀರಿ ಮಾನ್ಯ ಎಸ್.ಎಂ. ಕೃಷ್ಣ ಅವರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಚುನಾವಣಾ ಸಂದರ್ಭದಲ್ಲಿ temporary cards 29 ಲಕ್ಷ ಕೊಟ್ಟರು. ಬಂದವರ ಕೈಗೆಲ್ಲಾ ಒಂದೊಂದು ಚೀಟಿಯನ್ನು ಕಟ್ಟು ಕಳುಹಿಸಿದರು.

(ಗೊಂದಲ)

ಶ್ರೀ ಗೋವಿಂದ ಕಾರಜೋಳ:– ಮಾನ್ಯ ಬಾಲಚಂದ್ರರವರೆ, ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರದಲ್ಲಿ ನಾನು ಇರಲಿಲ್ಲ. ಅವರ ಸಂಪುಟದಲ್ಲಿ

ನಾನು ಮಂತ್ರಿಯಾಗಿರಲಿಲ್ಲ. ನಾನು ಕಾಂಗ್ರೆಸ್ಸಿನವನಾಗಿರಲಿಲ್ಲ. ಇದು ನಿಮಗೆ ಗೊತ್ತಿರಲಿ.

(ಗೊಂದಲ)

ಶ್ರೀ ಗೋವಿಂದ ಕಾರಜೋಳ:– ಚುನಾವಣಾ ಕಾರಣಕ್ಕಾಗಿ 29 ಲಕ್ಷ ಜನರಿಗೆ, ರಸ್ತೆ ಮೇಲೆ ಹೋಗುವವರಿಗೆಲ್ಲಾ ಒಂದೊಂದು ಚೀಟಿ ಕೊಟ್ಟಿರಿ. ಚುನಾವಣಾ ಕಾರಣಕ್ಕಾಗಿ ನೀವು ಬಳಕೆ ಮಾಡಿಕೊಂಡಿದ್ದೀರಿ. ಬೇರೆ ಯಾರೂ ಅಲ್ಲ. ಮಾನ್ಯ ಸಭಾಧ್ಯಕ್ಷರೆ, ಕೇಂದ್ರ ಸರ್ಕಾರದ permission ತೆಗೆದುಕೊಳ್ಳತಕ್ಕ ಅಗತ್ಯತೆ ಇಲ್ಲ. ಇದು ಆಡಳಿತಾತ್ಮಕವಾದ ವ್ಯವಸ್ಥೆ. ಇದನ್ನು ನಾವು ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು:– ಹೀಗಾದರೆ ಪ್ರಶ್ನೋತ್ತರ ಹೇಗೆ ಮುಗಿಸುವುದು?

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ:– ಸಾರ್, ಒಬ್ಬೊಬ್ಬರು ಅವರ ಬುದ್ಧಿಗೆ ಹೇಗೆ ಬರುತ್ತದೋ ಹಾಗೆಲ್ಲಾ ಮಾತನಾಡುತ್ತಿದ್ದಾರೆ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ:– First, ಸರ್ಕಾರಕ್ಕೆ ಸ್ಪಷ್ಟವಾದಂತಹ ತಿಳುವಳಿಕೆ ಇರಬೇಕು. ಕೇಂದ್ರ ಸರ್ಕಾರ 25 ವರ್ಷಗಳ ಹಿಂದೆಯೇ 'ಕುಟುಂಬ' ಎಂದರೆ ಏನು? ಎನ್ನುವುದನ್ನು define ಮಾಡಿದ್ದಾರೆ. ಐದು ಜನ ಜನಸಂಖ್ಯೆ ಇರತಕ್ಕದ್ದನ್ನು ಒಂದು ಕುಟುಂಬ ಎಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಪ್ರಶ್ನೋತ್ತರದಲ್ಲಿ ಈ ರೀತಿ ಚರ್ಚೆ ಮಾಡುತ್ತಾ ಹೋದರೆ ಹೇಗೆ? ಇದೇನು ಎಂದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ:– 'ಕುಟುಂಬ' ಎಂದರೆ ಏನು? ಎನ್ನುವುದೇ ಗೊತ್ತಿಲ್ಲವೇ? What is the meaning of a family?

(ಗೊಂದಲ)

ಅಧ್ಯಕ್ಷರು:– ಅವರು ಕೇಳಿದ ಪ್ರಶ್ನೆಯೇನು? ಇಲ್ಲಿ ಚರ್ಚೆ ನಡೆಯುತ್ತಿರುವುದೇನು?

(ಗೊಂದಲ)

ಅಧ್ಯಕ್ಷರು:– ತಾವೆಲ್ಲರೂ food minister ಆಗಿದ್ದವರು. ಅದೇ ಈಗ ತೊಂದರೆಯಾಗಿದೆ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ:– ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು:– ತಾವೆಲ್ಲಾ ಆಹಾರ ಮಂತ್ರಿಗಳಾಗಿದ್ದೀರಿ. ಅದೇ ಈಗ ಸಮಸ್ಯೆಯಾಗಿದೆ. ಇದನ್ನು ಮುಗಿಸೋಣ.

(ಗೊಂದಲ)

ಡಾ: ಹೆಚ್.ಸಿ.ಮಹಾದೇವಪ್ಪ:– ಸಾರ್, ಅವರು Programme ಕೊಡಲಿ, ಜನಗಳಿಗೆ ಸಹಾಯ ಮಾಡಲಿ. ಒಂದು 'ಕುಟುಂಬ' ಎಂದರೆ ಏನು? ಅದಕ್ಕೆ ಮಾರ್ಗಸೂಚಿಗಳೇನಿವೆ? ಬಡತನದ ರೇಖೆಗಿಂತ ಕೆಳಗಡೆ ಎಷ್ಟು ಜನರಿದ್ದಾರೆ? ಎಲ್ಲರಿಗೂ ಕೊಡಬೇಕೆನ್ನುವ ಆಸೆ ಇದ್ದರೆ, State Government ತನ್ನ ಖಜಾನೆಯಿಂದ ಏನು ಮಾಡಬೇಕು? ಎಂಬ ಬಗ್ಗೆ ಸ್ಪಷ್ಟವಾದಂತಹ ಪರಿಕಲ್ಪನೆ ಇಲ್ಲದೆ, ಏನು ಬರುತ್ತದೋ, ಹಾಗೆ ಮಾತನಾಡುತ್ತಾ ಹೋದರೆ ಸರಿಯಾಗುತ್ತದೆಯೇ? See, people are dying of malnutrition.

(ಗೊಂದಲ)

ಅಧ್ಯಕ್ಷರು:– ಇದನ್ನು ಮುಕ್ತಾಯ ಮಾಡಿದ್ದೇನೆ. ಮುಂದಿನ ಪ್ರಶ್ನೆ ಮಾನ್ಯ ರಾಜಶೇಖರ್ ಬಸವರಾಜ ಪಾಟೀಲ್‌ರವರು ಕೇಳಿ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಶಿವಲಿಂಗೇಗೌಡರೆ, Governor's address ಮೇಲೆ ನೀವು ಮಾತನಾಡುವಿರಂತೆ, ದಯವಿಟ್ಟು ಈಗ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಇದು ಸಾಮಾನ್ಯವಾದ ವಿಚಾರವಲ್ಲ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಕೇಂದ್ರ ಸರ್ಕಾರ ಒಬ್ಬನಿಗೆ 35 ಕೆ.ಜಿ. ಎಂದು ಕೊಟ್ಟಿರುವುದನ್ನು 4 ಕೆ.ಜಿ.ಗೆ divert ಮಾಡುವುದಕ್ಕೆ ಇವರಿಗೆ ಹೇಳಿದವರು ಯಾರು?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, Half an hour ಚರ್ಚೆಗೆ ಅವಕಾಶ ಮಾಡಿಕೊಡುವುದು ಬೇರೆ ವಿಚಾರ. ಅವರು 'ಹೌದು' ಎಂದು ಹೇಳಲಿ ಅಥವಾ 'ಇಲ್ಲ' ಎಂದಾದರೂ ಹೇಳಲಿ. ಅವರು ಹೀಗೆ ಉತ್ತರ ಹೇಳಿ ಎಂದು ನಾವು Press ಮಾಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು:– ಅವರು ಉತ್ತರ ಹೀಗೇ ಕೊಡಬೇಕೆಂದು ಹೇಳುವುದಕ್ಕಾಗುವುದಿಲ್ಲ. You cannot force.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:– ಇಲ್ಲ ಎಂದರೆ 'ಇಲ್ಲ' ಎಂದು ಹೇಳಲಿ ಅಥವಾ ಹೌದು ಎಂದರೆ 'ಹೌದು' ಎಂದು ಹೇಳಲಿ.

(ಗೊಂದಲ)

ಅಧ್ಯಕ್ಷರು:– ನೋಡಿ, ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನೀವು ಮತ್ತೆ ಮತ್ತೆ ಅದನ್ನೇ ಕೇಳುವುದರಲ್ಲಿ ಅರ್ಥವಿಲ್ಲ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಅವರು ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಇದೆ ಎಂದು ಹೇಳಲಿ, ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ.

(ಗೊಂದಲ)

ಕುಮಾರಿ ಶೋಭಾ ಕರಂದ್ಲಾಜೆ:– ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮಧ್ಯೆ dispute ಇದೆ. ನಾವು ಅವರಿಗೆ

ಕೊಡುವಂತಹ ಮಾಹಿತಿಯನ್ನು ಕೊಟ್ಟಿದ್ದೇವೆ. ಕೇಂದ್ರ ಮತ್ತು ರಾಜ್ಯದ ಮಧ್ಯೆ BPL ಕುಟುಂಬಗಳು ಎಷ್ಟಿರಬೇಕು? ಎಂಬ ಬಗ್ಗೆ ಮತ್ತು ಅವುಗಳು ನಮ್ಮಲ್ಲಿ ಜಾಸ್ತಿ ಇರುವುದರ ಬಗ್ಗೆ dispute ಇದೆ.

(ಗೊಂದಲ)

ಅಧ್ಯಕ್ಷರು:– ಆಯಿತು, ಮಾನ್ಯ ಸಚಿವರು ಹೇಳಿದ್ದಾರೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಕೇಂದ್ರ ಸರ್ಕಾರದವರು 35 ಕೆ.ಜಿ ಕೊಡಬೇಕೆಂದು ಕಾನೂನು ತಂದಿದೆ. ಇವರು ಅದನ್ನು divert ಮಾಡಿಕೊಂಡಿದ್ದಾರೆ. Divert ಮಾಡಿಕೊಂಡಿರುವುದಕ್ಕೆ ಇವರು ಕೇಂದ್ರ ಸರ್ಕಾರದ ಅನುಮತಿ ತೆಗೆದುಕೊಂಡಿದ್ದಾರೆಯೇ ಎಂಬುದನ್ನು ಈ ಸದನದಲ್ಲಿ ಇವರು ಹೇಳಲಿ.

(ಗೊಂದಲ)

ಅಧ್ಯಕ್ಷರು:– ಮುಂದಿನ ಪ್ರಶ್ನೆ ರಾಜಶೇಖರ ಬಸವರಾಜ ಪಾಟೀಲ್‌ರವರು ಕೇಳಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– Dispute ಇದೆ ಎಂದರೆ ಹೇಗೆ? 35 ಕೆ.ಜಿ. ಅಕ್ಕಿ ಕೊಡದೇ ಏಕೆ ಮೋಸ ಮಾಡುತ್ತಿದ್ದೀರಿ?

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ನೀವು ನೀವೇ ಮಾತನಾಡಬೇಡಿ.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ:– ನಿಮ್ಮವರೇ ಮುಖ್ಯಮಂತ್ರಿಗಳಾಗಿದ್ದರಲ್ಲ, ಆಗ ಏನು ಮಾಡಿದಿರಿ? ಅವತ್ತು ಎಲ್ಲಿ ಹೋಗಿತ್ತು?

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್:– ಇನ್ನೊಂದು ಅವಕಾಶ ಕೊಡುತ್ತೇನೆ ಎಂದಿದ್ದೀರಿ. ಆದ್ದರಿಂದ ಇದನ್ನು ಮುಗಿಸಲಿ.

ಅಧ್ಯಕ್ಷರು:– ನಾನು ಹೇಳಿದರೆ ಇವರು ಕೇಳುವುದೇ ಇಲ್ಲವಲ್ಲ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಕೆ.ಎಂ. ಶಿವಲಿಂಗೇಗೌಡರು ಸದನದ ಬಾವಿಯಲ್ಲಿ ಧರಣಿ ನಿರತರಾದರು)

ಶ್ರೀ ಎಸ್. ಸುರೇಶ್‌ಕುಮಾರ್:– ಮಾನ್ಯ ಶಿವಲಿಂಗೇಗೌಡರೆ, Question Hour ನಲ್ಲಿ ಹೀಗೆ ಮಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು:– ಇದು ಸರಿಯಲ್ಲ. ಕೇಂದ್ರ ಮತ್ತು ನಮ್ಮ ಮಧ್ಯೆ dispute ಇದೆ, ನಾವು ಬರೆದಿದ್ದೇವೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್:– ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಸ್ಪಷ್ಟವಾದ ಉತ್ತರ ಸಿಕ್ಕಿದೆ. ತಾವೂ ಕೂಡ ನಿರ್ದಿಷ್ಟ ಗಡುವನ್ನು ನಿಗದಿ ಮಾಡಿದ್ದೀರಿ.

(ಗೊಂದಲ)

ಅಧ್ಯಕ್ಷರು:– ಸ್ಪಷ್ಟವಾಗಿ ಹೇಳಿದ್ದಾರೆ, ಮತ್ತೆ ಮತ್ತೆ ಅದನ್ನೆ raise ಮಾಡಬೇಡಿ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶಿವಲಿಂಗೇಗೌಡರವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು:– ಆಯಿತು, ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶಿವಲಿಂಗೇಗೌಡರವರು ಸದನದ ಬಾವಿಯಿಂದ ತಮ್ಮ ಧರಣಿಯನ್ನು ಹಿಂತೆಗೆದುಕೊಂಡು ತಮ್ಮ ಸ್ಥಾನಕ್ಕೆ ಹಿಂದಿರುಗಿದರು)

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ:– ಸಮರ್ಪಕವಾದ ಉತ್ತರ ಕೊಟ್ಟಿದ್ದಾರೆ. ಸಮಯ ನಿಗದಿ ಮಾಡಲಿ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸದಸ್ಯರು ಧರಣಿ ವಾಪಸ್ ತೆಗೆದುಕೊಂಡಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ:– ಮಾನ್ಯ ಅಧ್ಯಕ್ಷರೆ, ನನ್ನ ಇಲಾಖೆ ಬಗ್ಗೆ ಸ್ವಲ್ಪ ಹೆಚ್ಚು ಗೌರವವನ್ನು ಮತ್ತು ಹೆಚ್ಚು ಒತ್ತನ್ನು ಕೊಡಿ.

(ಗೊಂದಲ)

ಅಧ್ಯಕ್ಷರು:– Please, ಅಲ್ಲಲ್ಲಿ ಮಾತನಾಡಬೇಡಿ. ಮಾನ್ಯ ಸದಸ್ಯರು ಪ್ರಶ್ನೆ ಕೇಳಿ.